ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 43 ಅಕ್ಟೋಬರ್ 25, 1981 ಬೆಲೆ : 60 ಪೈಸೆ

ಜನತೆಗೆ ದ್ರೋಹ

ಭಾರತ ರಾಷ್ಟ್ರೀಯ ಕಾಂಗ್ರೆಸ್ (ಸಮಾಜವಾದಿ) ಎಂದು ಹೆಸರಿಸಿಕೊಂಡಿರುವ ಶರದ್‌ಪವಾರ್ ನೇತೃತ್ವದ ಕಾಂಗ್ರೆಸ್ಸಿನ ಕೇರಳದ ಘಟಕ, ಅಂದರೆ ಎ. ಕೆ. ಅಂತೋಣಿಯವರ ನೇತೃತ್ವದ ಕಾಂಗ್ರೆಸ್ ಕೇರಳದ ಎಡ ಪ್ರಜಾಪ್ರಭುತ್ವ ರಂಗದಿಂದ ಹೊರಬಂದು, ತನ್ನ ನಾಲ್ಕು ಮಂತ್ರಿಗಳಿಂದ ರಾಜೀನಾಮೆ ಕೊಡಿಸಿದ್ದರ ಬೆನ್ನಲ್ಲೆ ಕೇರಳ ಕಾಂಗ್ರೆಸ್ (ಮಣಿ ಗುಂಪು) ಅದೇ ದಾರಿಯನ್ನನುಸರಿಸಿ ಎಡಪ್ರಜಾಪ್ರಭುತ್ವ ರಂಗದಿಂದ ಹೊರಬಂದು ತನ್ನ ಮೂವರು ಮಂತ್ರಿಗಳಿಂದ ರಾಜೀನಾಮೆ ಕೊಡಿಸಿತು. ಪರಿಣಾಮವಾಗಿ 141 ಮಂದಿ ಸದಸ್ಯರ ಬಲವಿರುವ ವಿಧಾನ ಸಭೆಯಲ್ಲಿ 93 ಸದಸ್ಯರ ಬೆಂಬಲದಿಂದ ಅಧಿಕಾರಕ್ಕೆ ಬಂದಿದ್ದ ಇ. ಕೆ. ನಾಯನಾರ್ ಮಂತ್ರಿಮಂಡಳದ ಬೆಂಬಲಿಗರ ಸಂಖ್ಯೆ 62ಕ್ಕೆ ಇಳಿಯಿತು. ಬಹುಮತ ಇಲ್ಲವೆಂದಾದೊಡನೆಯೇ ರಾಜೀನಾಮೆ ಕೊಡುವೆನೆಂದು ಸಾರಿದ್ದ ನಾಯನಾರ್ ಅವರು ರಾಜೀನಾಮೆ ಕೊಡುವುದರೊಂದಿಗೆ ಕೇರಳದಲ್ಲಿ ಇದೀಗ ಅಧ್ಯಕ್ಷರ ಆಳ್ವಿಕೆಯು ಜಾರಿಯಾಗಿದ್ದು, ವಿಧಾನಸಭೆಯನ್ನು ಅಮಾನತಿನಲ್ಲಿಡಲಾಗಿದೆ.

ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿದ್ದರೂ, ಸರ್ವಾಧಿಕಾರವನ್ನು ವಿರೋಧಿಸುವ ಮುಖ್ಯ ಕಾರ್ಯಕ್ರಮದ ದೃಷ್ಟಿಯನ್ನಿರಿಸಿಕೊಂಡು, ಜನತೆಯ ಮತ್ತು ಶ್ರಮಜೀವಿಗಳಿಗೆ ತುರ್ತುಪರಿಹಾರ ನೀಡುವಂತ ಇಪ್ಪತ್ತು ಅಂಶಗಳ ಕನಿಷ್ಟ ಕಾರ್ಯಕ್ರಮದ ಆಧಾರದಲ್ಲಿ ಜನತೆಯಿಂದ ವಿಶ್ವಾಸದ ಮತ ಪಡೆದು ಅಧಿಕಾರಕ್ಕೆ ಬಂದ ಎಡ ಪ್ರಜಾಪ್ರಭುತ್ವ ರಂಗದಿಂದ

ಸಂಪಾದಕೀಯ

ಹೊರಬಂದು ಅಂತೋಣಿ ಕಾಂಗ್ರೆಸ್ ಜನತೆಗೆ ದ್ರೋಹವೆಸಗಿದೆ. ಮಾತ್ರವಲ್ಲ, ತನ್ನ ಈ ಕ್ರಮದಿಂದ ಕಾಂಗ್ರೆಯ ತಾಳಕ್ಕೆ ತಕ್ಕಂತೆ ಕುಣಿದು ಸರ್ವಾಧಿಕಾರ ಶಕ್ತಿಗೆ ಅನುಕೂಲವಾಗಿಯೂ, ಪ್ರಜಾಪ್ರಭುತ್ವ ಶಕ್ತಿಗಳಿಗೆ ಪ್ರತಿಕೂಲವಾಗಿಯೂ ವರ್ತಿಸಿದೆ. ಸಣ್ಣಪುಟ್ಟ ವಿಚಾರಗಳನ್ನು ಬೃಹದಾಕಾರಕ್ಕೇರಿಸಿ, ಜನತೆಯ ಬೆಂಬಲ ಪಡೆದಿರುವ ರಂಗದಿಂದ ಕಾಂಗ್ರೆಸ್ (ಎಸ್) ಹೊರಬಂದಿರುವ ಉದ್ದೇಶ ಬೇರೆಯೇ ಇದ್ದಂತಿದೆ. ಅಂತೋಣಿ ಮತ್ತವರ ಬೆಂಬಲಿಗರು ಮುಂದೆ ಕಾಂಗ್ರೆಗೆ ಬೆಂಬಲವಿತ್ತರೆ ಅಥವಾ ಅದನ್ನು ಸೇರಿದರೆ ಆಶ್ಚರ್ಯಪಡಬೇಕಿಲ್ಲ! ಇದೀಗ ತಾನೆ ಮುಗಿದಿರುವ ಎ. ಐ. ಸಿ. ಸಿ. (ಎಸ್) ಅಧಿವೇಶನದಲ್ಲಿ ಕಾಂಗ್ರೆಯೊಂದಿಗೆ ವಿಶೇಷ ಸಂದರ್ಭದಲ್ಲಿ ಸಹಕರಿಸುವ ನಿರ್ಣಯವನ್ನು ಮಾಡಿದ್ದು ನೋಡಿದರೆ ಕೇವಲ ಅಂತೋಣಿ ಮಾತ್ರವೇ ಅಲ್ಲ, ಕಾಂಗ್ರೆಸ್ (ಎಸ್) ಪಕ್ಷ ಯಾವ ದಿಸೆಯಲ್ಲಿ ಯೋಚಿಸುತ್ತಿದೆ ಎಂದು ಅರ್ಥವಾಗುತ್ತಿದೆ.

ಅಂತೋಣಿ ಕಾಂಗ್ರೆಸ್ಸಿನದ್ದು ಜನತೆಗೆ ದ್ರೋಹವಾದರೆ ಮಣಿ ಕಾಂಗ್ರೆಸ್ಸಿನದ್ದು ಕೇವಲ ವಿಶ್ವಾಸದ್ರೋಹ ಮಾತ್ರವಲ್ಲ, ಅದು ಅನುಸರಿಸಿದ ಕ್ರಮ ತೀರಾ ಅಗೌರವದ್ದಾಗಿದೆ. ಮೊನೆಮೊನ್ನೆಯತನಕ ಎಡ ಪ್ರಜಾಪ್ರಭುತ್ವರಂಗದ ಸಾಧನೆಗಳ ಬಗ್ಗೆ ಕೊಂಡಾಡುತ್ತಿದ್ದ ಮಣಿ ಕಾಂಗ್ರೆಸ್ಸಿಗರು ಇದೀಗ ಇಂದಿರಾ ಕಾಂಗ್ರೆಸ್ಸು ತೋರಿಸಿದ ಆಸೆ ಆಮಿಷಗಳಿಗೆ ಬಲಿಯಾಗಿದ್ದಾರೆ ಎಂಬುದು ಸ್ಪಷ್ಟ. ಎಡ ಪ್ರಜಾಪ್ರಭುತ್ವರಂಗದ

[ಕಡೇ ಪುಟ ನೋಡಿ]

ನವೆಂಬರ್ 3ರಂದು ರಾಜ್ಯದಾದ್ಯಂತ ಸಾರ್ವತ್ರಿಕ ಮುಷ್ಕರ

1981 ಜೂನ್ 4ರಂದು ಮುಂಬಯಿಯಲ್ಲಿ ಬೆಲೆಏರಿಕೆ ಮತ್ತು ಕೇಂದ್ರ ಸರಕಾರದ ಕಾರ್ಮಿಕವಿರೋಧಿ ಧೋರಣೆಗಳ ವಿರುದ್ಧ ನಡೆದ ಕೇಂದ್ರ ಕಾರ್ಮಿಕ ಸಂಘಟನೆಗಳ ರಾಷ್ಟ್ರೀಯ ಸಮಾವೇಶವು ರೂಪಿಸಿದಅಖಿಲಭಾರತ ಚಳುವಳಿಯ ಎರಡನೆಯ ಹಂತವಾಗಿ 3-11-81ರಂದು ಅಖಿಲಭಾರತ ಪ್ರತಿಭಟನಾ ಮತ್ತು ಬೇಡಿಕೆಗಳ ದಿನವನ್ನು ದೇಶದಾದ್ಯಂತ ಜಂಟಿಯಾಗಿ ಆಚರಿಸಲಾಗುವುದು.

6-9-81ರಂದು ಬೆಂಗಳೂರಿನಲ್ಲಿ ನಡೆದ ಕರ್ನಾಟಕ ರಾಜ್ಯ ಸಮಾವೇಶವು 3-11-81ರಂದು ರಾಜ್ಯದಲ್ಲಿ ಸಾರ್ವತ್ರಿಕ ಮುಷ್ಕರವನ್ನು ನಡೆಸಿ ಈ ಅಖಿಲಭಾರತ ದಿನವನ್ನು ಆಚರಿಸಬೇಕೆಂದು ಕರೆಕೊಡಲಾಗಿತ್ತು.

3-11-81ರ ಅಖಿಲಭಾರತ ದಿನವನ್ನು ಮುಂಬಯಿಯ ಸಮಾವೇಶದಲ್ಲಿ ಭಾಗವಹಿಸಿದ್ದ ಹಾಗೂ ಆ ಸಮಾವೇಶದ ದಸ್ತಾವೇಜುಗಳನ್ನು ಒಪ್ಪಿರುವ ಇತರ ಕಾರ್ಮಿಕ ಸಂಘಗಳ ಜೊತೆ ಜಂಟಿಯಾಗಿ ಆಚರಿಸಬೇಕು. ಇತರ ಕಾರ್ಮಿಕ ಸಂಘಗಳನ್ನು ಒಗ್ಗೂಡಿಸಿ ಸಾರ್ವತ್ರಿಕ ಮುಷ್ಕರಕ್ಕೆ ಸಿದ್ಧತೆಗಳನ್ನು ಮಾಡುವ ಕೆಲಸದಲ್ಲಿ ಸಿ. ಐ. ಟಿ. ಯು. ಗೆ ಸೇರಿದ ಸಂಘಟನೆಗಳು ಶ್ರಮಿಸಬೇಕೆಂದು ಸಿ. ಐ. ಟಿ. ಯು.ವಿನ ರಾಜ್ಯಸಮಿತಿ ಪ್ರಧಾನಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪ ಕರೆನೀಡಿದ್ದಾರೆ.

ನವೆಂಬರ್ 23ರಂದು ನವದೆಹಲಿಯಲ್ಲಿ ಸಂಸತ್ ಭವನದ ಮುಂದೆ ಪ್ರದರ್ಶನ

ಅಖಿಲಭಾರತ ಚಳುವಳಿಯ ಮೂರನೆಯ ಹಂತವಾಗಿ ನವೆಂಬರ್ 23ರಂದು ನವದೆಹಲಿಯಲ್ಲಿ ಲೋಕಸಭೆಯ ಚಳಿಗಾಲದ ಅಧಿವೇಶನ ಪ್ರಾರಂಭವಾಗುವ ಮೊದಲನೆಯ ದಿವಸ ಸಂಸತ್‌ಭವನದ ಮುಂದೆ ಕಾರ್ಮಿಕ ನೌಕರರ ಬೃಹತ್ ಪ್ರದರ್ಶನವನ್ನು ನಡೆಸಬೇಕೆಂದುರಾಷ್ಟ್ರೀಯ ಚಳುವಳಿ ಸಮಿತಿ ಕರೆಕೊಟ್ಟಿದೆ.

ಈ ಚಾರಿತ್ರಿಕ ಪ್ರದರ್ಶನದಲ್ಲಿ ಭಾಗವಹಿಸಲು ಪ್ರತಿಯೊಂದು ಕಾರ್ಮಿಕ ಸಂಘವೂ ಪ್ರತಿನಿಧಿಗಳನ್ನು ನವದೆಹಲಿಗೆ ಕಳುಹಿಸಬೇಕು. ಪ್ರತಿಯೊಂದು ಕಾರ್ಖಾನೆಯೂ ಕನಿಷ್ಟ ಒಬ್ಬೊಬ್ಬ ಕಾರ್ಯಕರ್ತರನ್ನಾದರೂ ನವದೆಹಲಿಗೆ ಕಳುಹಿಸಿ ಕೊಡಬೇಕು.


ಸರಕಾರದ ನೀತಿಯ ಫಲವಾಗಿ ಜನತೆಯ ಜೀವನ ಸಂಕಷ್ಟಮಯವಾಗಿದ್ದು ಇದನ್ನು ವಿರೋಧಿಸದೆ ಅನ್ಯ ಮಾರ್ಗವಿಲ್ಲ. ಸರಕಾರದ ನೇರ ದಾಳಿಗೆ ಗುರಿಯಾಗಿರುವ ಕಾರ್ಮಿಕ ವರ್ಗ ಸಿಡಿದೇಳಬೇಕಾಗಿದೆ. ಜನವಿರೋಧಿ ಧೋರಣೆಗಳ ವಿರುದ್ಧ ಹೋರಾಡಲು ಅಣಿಯಾಗಬೇಕಾಗಿದೆ.

ದಾಂಡೇಲಿಯಲ್ಲಿ ಪೋಲೀಸರ ರಾಕ್ಷಸೀಕೃತ್ಯದ ಬಗ್ಗೆ ನ್ಯಾಯಾಂಗ ತನಿಖೆಗೆ ಒತ್ತಾಯಿಸಿ

ರಾಜ್ಯದಾದ್ಯಂತ ಪ್ರತಿಭಟನೆಗೆ ಸಿ. ಪಿ. ಐ. (ಎಂ) ಕರೆ

ಕಾರ್ಮಿಕ ನಗರವಾದ ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಪೋಲೀಸರು ನಡೆಸಿದ ರಾಕ್ಷಸೀ ಕೃತ್ಯ ಮತ್ತು ಸಿ.ಐ.ಟಿ.ಯು. ಮುಖಂಡರುಗಳಿಗೂ, ಕಾರ್ಯಕರ್ತರಿಗೂ ಮತ್ತು ಕಾರ್ಮಿಕರಿಗೂ ಕೊಟ್ಟಿರುವಚಿತ್ರಹಿಂಸೆ ಅತ್ಯಂತ ಭಯಾನಕವಾಗಿದೆ. ದಾಂಡೇಲಿಯಲ್ಲಿ ಪೋಲೀಸರು ಮನೆಮನೆ ನುಗ್ಗಿ ನಡೆಸಿದ ಚಿತ್ರಹಿಂಸೆಯನ್ನು ತಾಳಲಾರದೆ ಅನೇಕ ಮಂದಿ ಸ್ತ್ರೀಯರು ಮನೆ ಬಿಟ್ಟು ಓಡಿದ್ದಾರೆ. ಪೋಲೀಸರ ಅಮಾನುಷ ವರ್ತನೆಯಿಂದಾಗಿ ಎರಡು ತಿಂಗಳ ಗರ್ಭಿಣಿ, ಎಳೆಪ್ರಾಯದ ಭಾಗ್ಯಮ್ಮನಿಗೆ ಗರ್ಭಪಾತವಾಗಿದೆ. ಹತ್ತಾರು ಮಂದಿ ದಾಂಡೇಲಿ ಸರಕಾರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಅವರಲ್ಲಿ ಕೆಲವರಿಗಂತೂ ತೀವ್ರ ಜಖಂ ಆಗಿದೆ.

ತಾ. 11ರಂದು ಸ್ಟೇಷನ್ನಿಗೆ ಕರೆದುಕೊಂಡು ಹೋಗಿದ್ದ ಪ್ಲೈವುಡ್ ಕಾರ್ಮಿಕರ ಪರಿಸ್ಥಿತಿ ಬಗ್ಗೆ ವಿಚಾರಿಸಲು ಹೋದಾಗ ಸಿ.ಐ.ಟಿ.ಯು. ರಾಜ್ಯ ಸಮಿತಿ ಉಪಾಧ್ಯಕ್ಷ ಮತ್ತು ದಾಂಡೇಲಿ ಪುರಸಭೆಯ ಅಧ್ಯಕ್ಷ ಕಾಂ. ಆರ್. ಜಿ. ಸ್ಥಳೇಕರ್ ಅವರನ್ನು ಬಂಧಿಸಿ, ಪೋಲೀಸ್ ಸ್ಟೇಷನ್ನಿನಲ್ಲಿ ಬೆತ್ತಲೆ ಮಾಡಿ ಅಮಾನುಷವಾಗಿ ಹೊಡೆದಿದ್ದಾರೆ. ಪೋಲೀಸ್ ಎಸ್.ಪಿ.ಯವರಿಂದಲೇ ಇದು ನಡೆಯಿತು. ವಕೀಲರಾದ ಕಾಂ. ಧಾರೇಶ್ವರ್ ಅವರನ್ನು ಬಂಧಿಸಿ, ಸಿಕ್ಕಾಪಟ್ಟೆ ಹೊಡೆದು, ಬೂಟುಗಾಲಿನಲ್ಲಿ ಒದ್ದಿರುವರು. ಮರುದಿನ ಪ್ರತಿಭಟಿಸಿದ ದಾಂಡೇಲಿಯ ಪೇಪರ್ ಮಿಲ್ ಮತ್ತು ಇತರೆ ಕಾರ್ಮಿಕರ ಮೇಲೆ ಲಾಠಿಚಾರ್ಜು ನಡೆಸಿ, ಗೋಲಿಬಾರು ಮಾಡಿ, ನಿಷೇಧಾಜ್ಞೆ ಹೇರಿ, ನೂರಐವತ್ತಕ್ಕಿಂತಲೂ ಹೆಚ್ಚಿಗೆ ಮಂದಿಯನ್ನು ಬಂಧಿಸಿರುವರು. ಹಲವರ ಮೂಳೆ ಮುರಿದಿದೆ. 29 ಮಂದಿಯನ್ನು ಕಾರವಾರ ಜೈಲಿನಲ್ಲಿರಿಸಿರುವರು. ಕೆಲವರನ್ನು ಹಿಂಡಲಗಿ ಮತ್ತು ಇತರ ಕಡೆ ಇರಿಸಿರುವರು. ಪೇಪರು ಮಿಲ್ಲು ಯೂನಿಯನ್ನಿನ ಪ್ರಧಾನಕಾರ್ಯದರ್ಶಿ ಕಾಂ. ಉಮೇಶನ್ನಾಯ್ಕ್‌ನವರೂ, ಇನ್ನಿತರೆ ಮುಂದಾಳುಗಳೂ ಬಂಧನಕ್ಕೊಳಗಾಗಿದ್ದರು.



“ದೌರ್ಜನ್ಯಕ್ಕೊಳಗಾದ ಭಾಗ್ಯಮ್ಮ”

ದಾಂಡೇಲಿಗೆ ಭೇಟಿ ಕೊಟ್ಟಿರುವ ಸಿ. ಐ. ಟಿ. ಯು. ರಾಜ್ಯಸಮಿತಿ ಅಧ್ಯಕ್ಷ ಕಾಂ. ಸೂರ್ಯನಾರಾಯಣ ರಾವ್ ಅವರು ಪೋಲೀಸ್ ದೌರ್ಜನ್ಯವನ್ನು ಖಂಡಿಸಿ ಪತ್ರಿಕಾ ಸಮ್ಮೇಳನವನ್ನು ನಡೆಸಿ ಎಲ್ಲಾ ಕಡೆ ಪ್ರತಿಭಟನೆಗೆ ಕರೆ ಇತ್ತಿರುವರು. ಸಿ. ಐ. ಟಿ. ಯು. ರಾಜ್ಯ ಕಾರ್ಯದರ್ಶಿ ಕಾಂ. ವಿ.ಜೆ.ಕೆ. ನಾಯರ್ ಅವರು ದಾಂಡೇಲಿ ಪ್ರದೇಶದಲ್ಲಿ ಪ್ರವಾಸ ಮಾಡಿ

[ಕಡೇ ಪುಟ ನೋಡಿ]

ಭೋಲಾನಾಥರ ಟ್ರಸ್ಟ್ ವಕ್ರಬುದ್ಧಿಯ ಉತ್ಪತ್ತಿ

ಆರಿತುಳಿ ಹಾಗೂ ಇಂದಿರಾ ಗಾಂಧಿಯವರ ಕೃಪೆಯಿಂದಾಗಿ ಟ್ರಸ್ಟ್ ಬಗ್ಗೆ ಮಾತನಾಡಿದರೆ ಸಾಕು ಜನರ ಗಮನ ಸೆಳೆಯಬಹುದು. ಆದ್ದರಿಂದ ತಾನೂ ಯಾಕೆ ಟ್ರಸ್ಟ್ ಬಗ್ಗೆ ಮಾತನಾಡಬಾರದು ಎಂದು ಪಶ್ಚಿಮ ಬಂಗಾಳದ ಶ್ರೀ ಭೋಲಾನಾಥ್ ಸೇನ್‌ರವರ ಮನಸ್ಸಿಗೆ ಬಂತು. ಈ ಮೂಲಕ ಎಡರಂಗ ಸರಕಾರದ ಮೇಲೆ ಸಾಕಷ್ಟು ಕೆಸರು ಚೆಲ್ಲಿದ್ದರೆ ಸ್ವಲ್ಪವಾದರೂ ಅಂಟಿ ನಿಲ್ಲಬಹುದು ಎಂಬ ಆಸೆ ಅವರದು. ಸರಿ, ಕೆಲವು ಪತ್ರಿಕಾಕರ್ತರನ್ನು ಕರೆದು 'ಪಶ್ಚಿಮ ಬಂಗಾಳ ವೈದ್ಯಕೀಯ ಸಹಾಯ ಧರ್ಮದತ್ತಿ' ಹಾಗೂ 'ಪಶ್ಚಿಮ ಬಂಗಾಳ ಮಾನವೀಯ ಸಹಾಯ ಸೇವಾ ಸಮಾಜ' ಈ ಎರಡು ಟ್ರಸ್ಟ್‌ಗಳ ಹೆಸರು ಹೇಳಿ ಇವು ಅಂತುಳಿಯವರದ್ದಕ್ಕಿಂತಲೂ 'ಕೆಟ್ಟ ಹಗರಣ' ಎಂದು ಹೇಳಿಕೆಕೊಟ್ಟರು. ಅವರ ಪ್ರಕಾರ ಮುಖ್ಯಮಂತ್ರಿ ಜ್ಯೋತಿಬಸು ಹಾಗೂ ಅವರ "ಬಂಧು-ಮಿತ್ರರು" ಈ ಮೂಲಕ ಸಾರ್ವಜನಿಕ ಹಣ ಪಡೆಯಲು ಹವಣಿಸುತ್ತಿದ್ದಾರೆ.

ನಿಜಸಂಗತಿ ತಿಳಿಯುವ ಮೊದಲು ಒಂದು ವಿಷಯ ಗಮನದಲ್ಲಿಡಬೇಕು. ಶ್ರೀ ಸೇನ್ ಪಶ್ಚಿಮ ಬಂಗಾಳದ ಕಾಂಗ್ರೆಸ್ (ಐ) ವಿಧಾನಮಂಡಲ ಪಕ್ಷದ ನಾಯಕರು ಮಾತ್ರವಲ್ಲ, ಒಬ್ಬ ಪ್ರಸಿದ್ಧ ಬ್ಯಾರಿಸ್ಟರ್ ಕೂಡಾ, ಅಂತುಳೆಯವರಂತೆ. ಈ ಬ್ಯಾರಿಸ್ಟರ್ ತಾನೊಬ್ಬ ನಿಜಸಂಗತಿಯನ್ನು ಮರೆಮಾಚುವ ಸುಳ್ಳುಗಾರ, ನಿಕೃಷ್ಟ ದೂಷಕ ಎಂದು ಈ ಮೂಲಕ ಸಾಬೀತುಪಡಿಸಿಕೊಂಡಿದ್ದಾರೆ.

ನಿಜಸಂಗತಿ

ಮೇಲೆ ಹೇಳಿದ ಮೊದಲ ಟ್ರಸ್ಟ್ ಈ ವರ್ಷದ ಜುಲೈ 27ರಂದು ಪ್ರಾರಂಭವಾಯಿತು. ಇದರ ಸ್ಥಾಪಕ ಸದಸ್ಯರು ಆಗ ರಾಜ್ಯಪಾಲರಾಗಿದ್ದ ಟಿ.ಎನ್.ಸಿಂಗ್, ಇತ್ತೀಚೆಗೆ ಸರ್ಕಾರೀ ಸೇವೆಯಿಂದ ನಿವೃತ್ತರಾದ ಪ್ರಖ್ಯಾತ ವೈದ್ಯ ಡಾ. ಮಣಿ ಚೇತ್ರಿ ಹಾಗೂ ಡಾ. ಎಸ್. ಕೆ. ಮುಖರ್ಜಿ. ಇವರ್‍ಯಾರೂ ಸಿ. ಪಿ. ಐ. (ಎಂ) ವ್ಯಕ್ತಿಗಳಲ್ಲ, ಮಾತ್ರವಲ್ಲ ರಾಜಕೀಯ ವ್ಯಕ್ತಿಗಳೂ ಅಲ್ಲ. ಕಲಕತ್ತೆಯ ವೈದ್ಯಕೀಯ ಶಿಕ್ಷಣ ಹಾಗೂ ಸಂಶೋಧನಾ ಸ್ನಾತಕೋತ್ತರ ಸಂಸ್ಥೆಯ ವಿವಿಧ ವಿಭಾಗಗಳಲ್ಲಿ ಸಂಶೋಧನಾ ಕಾರ್ಯಕ್ಕೆ ಸಂಬಂಧಪಟ್ಟಂತೆ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು ಈ ಟ್ರಸ್ಟ್‌ನ ಉದ್ದೇಶ. ಇದಕ್ಕಾಗಿ 'ರಾಜಭವನ'ದ ಉಪಯೋಗದಲ್ಲಿಲ್ಲದ ಆಸ್ತಿಯನ್ನು ಮಾರಿ ಈ ಹಣವನ್ನು ಪ. ಬಂಗಾಳ ಜನತೆಗೆ ಪ್ರಯೋಜನವಾಗುವ ಈ ಟ್ರಸ್ಟ್ ಸ್ಥಾಪಿಸಲು ತೊಡಗಿಸಬೇಕೆಂಬ ತನ್ನ ಆಕಾಂಕ್ಷೆಯನ್ನು ಆಗಿನ ರಾಜ್ಯಪಾಲರು ಸರಕಾರಕ್ಕೆ ತಿಳಿಸಿದ್ದರು. ಸರಕಾರ ಇದಕ್ಕೆ ಒಪ್ಪಲಿಲ್ಲ. ಆದರೆ ಟ್ರಸ್ಟಿನ ಉದ್ದೇಶ ಪ್ರಶಂಸಾರ್ಹವಾದ್ದರಿಂದ ಇಂತಹ ಟ್ರಸ್ಟ್‌ಗೆ ವಾರ್ಷಿಕವಾಗಿ ಸುಮಾರು 15 ಲಕ್ಷ ರೂ. ಖರ್ಚು ಬರಬಹುದೆಂದು ಲೆಕ್ಕಾಚಾರಮಾಡಿ 2.5 ಕೋಟಿ ರೂ.ಗಳನ್ನು ಕ್ರೋಢೀಕೃತ ನಿಧಿಯಿಂದ ನಿಶ್ಚಿತ ಠೇವಣಿಯಾಗಿ ತೆಗೆದಿರಿಸಿ ಅದರ ಬಡ್ಡಿಯಿಂದ ಟ್ರಸ್ಟ್ ನಿರ್ವಹಿಸಲು ಸಹಾಯಕವಾಗುವುದೆಂದು ನಿರ್ಧರಿಸಲಾಯಿತು. ಇದರ ಲೆಕ್ಕಪತ್ರ ರಾಜ್ಯದ ಆಡಿಟರ್-ಜನರಲ್‌ರವರ ಪರಿಶೀಲನೆಗೊಳಪಟ್ಟಿರುತ್ತದೆ. ಆದರೆ ಬ್ಯಾರಿಸ್ಟರ್ ಸೇನ್‌ರವರ ಪ್ರಕಾರ 'ರಾಜಭವನ'ದ ಜಮೀನನ್ನು ಮಾರಲಾಗಿದೆ ಹಾಗೂ 2.5 ಕೋಟಿ ರೂ. ಟ್ರಸ್ಟಿಗೆ ಕೊಡಲಾಗಿದೆ! ಆದರೆ ಈ ಬ್ಯಾರಿಸ್ಟರ್ ಜಮೀನು ಮಾರಾಟದ ದಾಖಲೆಗಳನ್ನು ಒದಗಿಸಬಲ್ಲರೇ? ಇಲ್ಲ. ಏಕೆಂದರೆ ಅಂತಹ ದಾಖಲೆಗಳೇ ಇಲ್ಲ. ದಾಖಲೆಗಳೇ ಯಾಕೆ ಇಲ್ಲವೆಂದರೆ ಅಂತಹ ಮಾರಾಟ ನಡೆದೇ ಇಲ್ಲ. ಮೇಲೆ ಹೇಳಿದ ರೀತಿಯಲ್ಲಿ ವ್ಯವಸ್ಥೆಗೊಂಡ ಟ್ರಸ್ಟ್‌ನ ಹಣ ಜ್ಯೋತಿ ಬಸುರವರ 'ಬಂಧು-ಮಿತ್ರ'ರ ಪಾಲಿಗೆ ಹೋಗುವುದು ಹೇಗೆ ಎಂದು ಬ್ಯಾರಿಸ್ಟರರೇ ವಿವರಿಸಬೇಕು. ಹೊಸ ರಾಜ್ಯಪಾಲರು ಈ ಟ್ರಸ್ಟ್‌ನ ದಾಖಲೆಗಳನ್ನು ನೋಡುವಂತಿಲ್ಲ ಎಂದು ಈ ಅಜ್ಞಾನಿ ಬ್ಯಾರಿಸ್ಟರರ ಇನ್ನೊಂದು ಪ್ರಲಾಪ. ರಾಜ್ಯದ ರಾಜ್ಯಪಾಲರು ಈ ಟ್ರಸ್ಟಿನ ಅಧ್ಯಕ್ಷರು ಎಂಬುದು ಅವರಿಗೆ ಗೊತ್ತಿಲ್ಲವೇ?

ಉದ್ದೇಶಪೂರ್ವಕ ಗೊಂದಲ

ಜನರನ್ನು ಸಾಕಷ್ಟು ಗೊಂದಲಕ್ಕೀಡುಮಾಡಿದರೆ ತನ್ನ ಪುರಾಣವನ್ನು ಜನ ಸ್ವಲ್ಪವಾದರೂ ನಂಬಿಯಾರು ಅಥವಾ ಸಂಶಯವಾದರೂ ಉಳಿದೀತು ಎಂದುಕೊಂಡು ಈ ಬ್ಯಾರಿಸ್ಟರ್ ಮಾಡಿದೆಂದ್ದರೆ ಇನ್ನೊಂದು ಸಂಸ್ಥೆಯೊಡನೆ ಈ ಟ್ರಸ್ಟನ್ನು ಬೇಕೆಂದೇ ಗಂಟುಹಾಕಿದ್ದು.

'ಪಶ್ಚಿಮ ಬಂಗಾಳ ಮಾನವೀಯ ಸಹಾಯ ಸೇವಾ ಸಮಾಜ'ದಲ್ಲಿ ಶ್ರೀ ಟಿ. ಎನ್. ಸಿಂಗ್, ಸಿ. ಪಿ. ಐ. (ಎಂ) ಎಂ. ಪಿ. ಗಳಾದ ಜ್ಯೋತಿರ್ಮಯಬಸು, ಸೈಯದ್ ಶಹದುಲ್ಲಾ ಮತ್ತು ಅಮರ್‌ದತ್ತಾ, ಎಸ್. ಕೆ. ಬ್ರಹ್ಮಚಾರಿ, ಡಾ|| ಎನ್.ಸಿ. ಬ್ಯಾನರ್ಜಿ ಹಾಗೂ ರಬೀಂದ್ರನಾಥ್ ದಾಸ್ ಸದಸ್ಯರು. ಇಲ್ಲೇ ಜ್ಯೋತಿಬಸುರವರ 'ಬಂಧು-ಮಿತ್ರ'ರು ಬರುವುದು (ಪ. ಬಂಗಾಳ ಸರಕಾರದ ಜ್ಯೂನಿಯರ್ ಸ್ಟ್ಯಾಂಡಿಂಗ್ ವಕೀಲ ಅಮಲ್ ದತ್ತಾ ಜ್ಯೋತಿಬಸುರವರ ಸಂಬಂಧಿ). ಈ ಸಮಾಜಕ್ಕೂ ಮೊದಲು ಹೇಳಿದ ಟ್ರಸ್ಟಿಗೂ ಏನೇನೂ ಸಂಬಂಧವಿಲ್ಲ. ಆ ಟ್ರಸ್ಟಿನ ಲೆಕ್ಕಪತ್ರ ಆಡಿಟರ್-ಜನರಲ್‌ರ ಪರಿಶೀಲನೆಗೊಳಪಟ್ಟಿದ್ದರೆ, ಈ 'ಸಮಾಜ'ಮತಿಗೆ ಸಂಗ್ರಹಿಸುವುದರ ಮೂಲಕ ಹಣ ಸಂಗ್ರಹಿಸುತ್ತದೆ. ಈ ರೀತಿಯ ಹಣ ಸಂಗ್ರಹದ ಮೂಲಕ ಕಲ್ಕತ್ತಾ ಪೋರ್ಟ್ ಟ್ರಸ್ಟಿನಿಂದ ಸುಮಾರು 8000 ಚದರ ಮೀಟರ್ ಜಮೀನು ಲೀಸಿಗೆ ಪಡೆದಿದೆ. ಈ 'ಸಮಾಜ'ದ ಉದ್ದೇಶ ಮೇಟಿಯಾಬ್ರುಜ್ ಎಂಬ ತೀರಾ ಹಿಂದುಳಿದ ಪ್ರದೇಶದಲ್ಲಿ ಆಸ್ಪತ್ರೆ ಸ್ಥಾಪಿಸುವುದು. 'ಸಮಾಜ' ಖಾಸಗೀ ಮತಿಗೆ ಸಂಗ್ರಹಿಸುತ್ತಿರುವುದರಿಂದ ರಾಜ್ಯಸರಕಾರಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. 'ಸಮಾಜ' ಪಡೆದ ಜಾಗ ಕಲ್ಕತ್ತಾ ಪೋರ್ಟ್ ಟ್ರಸ್ಟ್‌ನದ್ದು, ಅಂದರೆ ಕೇಂದ್ರಸರಕಾರದ್ದು. ಆದ್ದರಿಂದ ಈ ಬಗ್ಗೆ ಏನಾದರೂ ಸಂದೇಹಗಳಿದ್ದರೆ ದಿಲ್ಲಿಯಲ್ಲಿರುವ ತನ್ನ ಗುರುಗಳನ್ನೇ ಕೇಳಬೇಕೆಂದು ಬ್ಯಾರಿಸ್ಟರ್ ಸೇನ್‌ರಿಗೆ ಗೊತ್ತಿರಲೇಬೇಕು.

ಇದೆಲ್ಲಾ ಎಲ್ಲರಿಗೂ ಗೊತ್ತಾದ ಮೇಲೆ ಭೋಲಾಸೇನ್ ಟ್ರಸ್ಟ್‌ನ ಉದ್ದೇಶ ಹಾಗಿತ್ತು, ಹೀಗಿತ್ತು, ಆದರ ಯೋಜನೆ ಹಾಗಿತ್ತು ಹೀಗಿತ್ತು ಎನ್ನುತ್ತಿದ್ದಾರೆ. ಯಾರ ಉದ್ದೇಶ, ಎಲ್ಲಿಯ ಯೋಜನೆ? ನಿಮ್ಮ ವಕ್ರಬುದ್ಧಿಯಲ್ಲೇನು, ಬ್ಯಾರಿಸ್ಟರ್ ಸೇನ್? ●

ಪಕ್ಷದ ಕುಂದಾಪುರ ತಾಲ್ಲೂಕು ಸಮ್ಮೇಳನ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕುಂದಾಪುರ ತಾಲ್ಲೂಕು ಸಮ್ಮೇಳನ ತಾರೀಕು 4-10-1981ರಂದು ಹಂಚಿನ ಮಜೂರರ ಸಂಘದ ಕಛೇರಿಯಲ್ಲಿ ಕಾಂ. ಸಿ. ನಾರಾಯಣನವರ ಅಧ್ಯಕ್ಷತೆಯಲ್ಲಿ ಸೇರಿತು.

ತಾಲ್ಲೂಕು ಸಮಿತಿ ಕಾರ್ಯದರ್ಶಿಯವರಾದ ಕಾಂ. ಅಬ್ರಹಾಂ ಕರ್ಕಡರವರು ಪ್ರತಿನಿಧಿಗಳನ್ನು ಸ್ವಾಗತಿಸಿದರು.

ಆರಂಭದಲ್ಲಿ ಪಕ್ಷದ ಪೊಲಿಟ್ ಬ್ಯೂರೋ ಸದಸ್ಯರಾದ ಕಾಂ. ಎ. ಬಾಲಸುಬ್ರಮಣ್ಯಂ ನಿಧನದ ಬಗ್ಗೆ ಸಭೆಯು ಸಂತಾಪ ಸೂಚಕ ನಿರ್ಣಯವನ್ನು ಅಂಗೀಕರಿಸಿತು. ಸಿ.ಪಿ.ಐ. ಮುಖಂಡ ಮತ್ತು ರಾಜ್ಯಸಭಾ ಸದಸ್ಯ ಕಾಂ. ಭೂಪೇಶ್ ಗುಪ್ತ, ಕಾಂ. ಎ. ಕೆ. ನಾರಾಯಣ ಮತ್ತು ಕಾಂ. ವಿ. ನಾಗಪ್ಪನವರ ನಿಧನದ ಬಗ್ಗೆ 2ನಿಮಿಷ ಎದ್ದು ನಿಂತು ಸಂತಾಪ ವ್ಯಕ್ತಪಡಿಸಲಾಯಿತು. ಇತ್ತೀಚೆಗೆ ಗುಲ್ವಾಡಿಯಲ್ಲಿ ದೋಣಿ ದುರಂತದಲ್ಲಿ ಮೃತರಾದ ಹಂಚಿನ ಕಾರ್ಮಿಕ ಬಸವಶೆಟ್ಟಿ ಮತ್ತು ಇತರ 8 ಮಂದಿಗೂ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ತಾಲ್ಲೂಕು ಸಮಿತಿಯ ಕಾರ್ಯದರ್ಶಿಯವರು ಕಳೆದ 3ವರ್ಷದಲ್ಲಿ ಪಕ್ಷದ ಮತ್ತು ಪಕ್ಷದ ನೇತೃತ್ವದಲ್ಲಿ ನಡೆದ ಇತರ ಸಾಮೂಹಿಕ ಸಂಘಟನೆಗಳ ಚಟುವಟಿಕೆ ಮತ್ತು ಹೋರಾಟದ ವರದಿಯನ್ನು ಮಂಡಿಸಿದರು.

ಅನಂತರ ವರದಿಯ ಮೇಲೆ ಹದಿನಾಲ್ಕು ಮಂದಿ ಪ್ರತಿನಿಧಿಗಳು ವರದಿಗೆ ಪೂರಕವಾಗಿ ಹಾಗೂ ಪೂರ್ಣ ವರದಿ ಆಗುವ ನಿಟ್ಟಿನಲ್ಲಿ ಚಟುವಟಿಕೆ ಮತ್ತು ಕುಂದುಕೊರತೆಗಳನ್ನು ವಿವರಿಸುತ್ತಾ, ಸಾಲ್ಕಿಯಾ ಮತ್ತು ಮೈಸೂರಿನಲ್ಲಿ ನಡೆದ ರಾಜ್ಯಸಮಿತಿ ಪ್ಲೀನಮ್‌ಗಳ ಸಂಘಟನಾ ನಿರ್ಣಯಗಳ ಆಧಾರದಲ್ಲಿ ಸಾಮೂಹಿಕ ಕ್ರಾಂತಿಕಾರಿ ಪಕ್ಷವನ್ನು ಕಟ್ಟುವ ನಿಟ್ಟಿನಲ್ಲಿ ತಮ್ಮ ಅಭಿಪ್ರಾಯಗಳನ್ನು ನೀಡಿದರು.

ಪಕ್ಷದ ದ. ಕ. ಜಿಲ್ಲಾ ಕಾರ್ಯದರ್ಶಿಯವರಾದ ಕಾಂ. ಕೆ. ಆರ್. ಶ್ರೀಯಾನ್‌ರವರು ಸಭೆಯಲ್ಲಿ ಉಪಸ್ಥಿತರಿದ್ದು, ಅವರು ತಮ್ಮ ಭಾಷಣದಲ್ಲಿ ಬದಲಾದ ರಾಜಕೀಯ ಪರಿಸ್ಥಿತಿಯ ವಿವರಣೆ ನೀಡುತ್ತಾ, ಪಕ್ಷದ ಸಂವಿಧಾನ ಮತ್ತು ಸಂಘಟನಾ ನಿಯಮಗಳನ್ನು ಪಾಲಿಸುವ ನಿಟ್ಟಿನಲ್ಲಿ ಪಕ್ಷದ ಸದಸ್ಯರು ಮುಂದಾಗಿ, ಎಲ್ಲಾ ಹೋರಾಟಗಳಲ್ಲಿ ಕ್ರಿಯಾಶೀಲರಾಗಿ ಭಾಗವಹಿಸಿ ನೇತೃತ್ವ ನೀಡಲು ಶ್ರಮಿಸಬೇಕೆಂದರು.

'ಬೆಲೆಯೇರಿಕೆ' ಹಾಗೂ ಇತರ ಮುಖ್ಯ ನಿರ್ಣಯಗಳನ್ನು ಅಂಗೀಕರಿಸಿ ಜಿಲ್ಲಾ ಮತ್ತು ರಾಜ್ಯ ಸಮ್ಮೇಳನವನ್ನು ಯಶಸ್ವಿಗೊಳಿಸಲು ನಿರ್ಧಾರ ಮಾಡಲಾಯಿತು.

ಅನಂತರ ಹದಿನಾಲ್ಕು ಮಂದಿ ಇರುವ ಕುಂದಾಪುರ ತಾಲ್ಲೂಕು ಸಮಿತಿಯನ್ನು ರಚಿಸಲಾಯಿತು. ಸಮಿತಿಗೆ ಕಾರ್ಯದರ್ಶಿಯಾಗಿ ಕಾಂ. ಅಬ್ರಹಾಂ ಕರ್ಕಡರವರನ್ನು ಆಯ್ಕೆ ಮಾಡಲಾಯಿತು. ○

ಡಿ.ವೈ.ಎಫ್.ಐ. ತಾಲ್ಲೂಕು ಸಮ್ಮೇಳನ

11-10-81ರಂದು ಡಿ. ವೈ. ಎಫ್. ಐ. ಸುಳ್ಯ ತಾಲ್ಲೂಕು ಘಟಕದ ಸಮ್ಮೇಳನವು ಸುಳ್ಯದಲ್ಲಿ ನಡೆಯಿತು. ಅಧ್ಯಕ್ಷತೆಯನ್ನು ಕಾಂ. ಸೂರ್ಯನಾರಾಯಣ ಭಟ್ ವಹಿಸಿದ್ದರು. ಸಮ್ಮೇಳನಕ್ಕೆ 115 ಜನ ಪ್ರತಿನಿಧಿಗಳು ಹಾಗೂ ನೂರಕ್ಕೂ ಮಿಕ್ಕಿ ಹಿತೈಷಿಗಳು ಭಾಗವಹಿಸಿದ್ದರು.

ಆರಂಭದಲ್ಲಿ ಕಾಂ. ಮುಹಮ್ಮದ್ ಸ್ವಾಗತಿಸಿದರು. ದಕ್ಷಿಣ ಕನ್ನಡ ಜಿಲ್ಲಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಮ್ರೇಡ್ ಕೆ. ಆರ್. ಶ್ರೀಯಾನ್, ಸುಳ್ಯ ತಾಲ್ಲೂಕು ತೋಟ ಕೆಲಸಗಾರರ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಕಾತಮುತ್ತು ಇವರುಗಳು ಸಮ್ಮೇಳನಕ್ಕೆ ಶುಭ ಹಾರೈಸಿದರು.

ತಾಲ್ಲೂಕು ಸಮಿತಿಯ ಕಾರ್ಯದರ್ಶಿ ಎ. ಜಯರಾಮ್ ಅವರು ವರದಿ ಮಂಡಿಸಿದರು. ಚರ್ಚೆ ನಡೆದು ವರದಿಯನ್ನು ಅಂಗೀಕರಿಸಲಾಯಿತು. ಯುವಜನ ಸಂಘಟನೆಯ ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂ. ರಮೇಶ್, ಬಿ. ಉಲ್ಲಾಳ ಅವರು ಸಂಘಟನೆಯ ಧ್ಯೇಯೋದ್ದೇಶಗಳ ಕುರಿತು ತಿಳಿಸಿದರು.

ಕೊನೆಯಲ್ಲಿ ಈ ಕೆಳಕಂಡ ಹೊಸ ಸಮಿತಿಯೊಂದನ್ನು ಚುನಾಯಿಸಲಾಯಿತು. ಅಧ್ಯಕ್ಷರಾಗಿ ಕಾಂ. ಪಿ. ಕೆ. ಮೂಸ, ಉಪಾಧ್ಯಕ್ಷರುಗಳಾಗಿ ಎಂ. ಎಲ್. ಚಂದ್ರಶೇಖರ ಮತ್ತು ಭಾಸ್ಕರ ರಾವ್, ಪ್ರಧಾನ ಕಾರ್ಯದರ್ಶಿಯಾಗಿ ಡಿ. ಚಿನ್ನಪ್ಪ, ಕಾರ್ಯದರ್ಶಿಗಳಾಗಿ ಎ. ಜಯರಾಮ ಮತ್ತು ಪದ್ಮಯ್ಯ, ಖಜಾಂಚಿಯಾಗಿ ಕೆ. ಎಂ. ಮುಹಮ್ಮದ್ ಹಾಗೂ 30ಜನರ ಸಮಿತಿಯ ಸದಸ್ಯರನ್ನು ಚುನಾಯಿಸಲಾಯಿತು. ○

ಮೈಸೂರಿನಲ್ಲಿ ಎನ್.ಸಿ.ಸಿ. ಘಟಕ ಅಸ್ತಿತ್ವಕ್ಕೆ

ಮೈಸೂರು ನಗರದಲ್ಲಿ ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ಬಿ.ಎಂ.ಎಸ್. ಗಳಿಗೆ ಸೇರಿದ ಸಂಘಟನೆಗಳ ಪ್ರತಿನಿಧಿಗಳು 2-10-81ರಂದು ಸಭೆ ಸೇರಿ ರಾಷ್ಟ್ರೀಯ ಆಂದೋಲನ ಸಮಿತಿ (ಎನ್.ಸಿ.ಸಿ.)ಯ ಮೈಸೂರು ಘಟಕವನ್ನು ರಚಿಸಿದರು.

ಮೈಸೂರು ಎನ್.ಸಿ.ಸಿ. ಘಟಕದ ಸಂಚಾಲಕರುಗಳಾಗಿ ಸಿ.ಐ.ಟಿ.ಯು. ವಿನಿಂದ ಕಾಂ. ಮೋಹನ್‌ಕುಮಾರ, ಎ.ಐ.ಟಿ.ಯು.ಸಿ. ಯಿಂದ ಕಾಂ. ಕೆ. ವೆಂಕಟರಾಮಯ್ಯ ಮತ್ತು ಬಿ.ಎಂ.ಎಸ್. ನಿಂದ ಕೃಷ್ಣ ಐಯ್ಯಂಗಾರ್ ಮತ್ತು ಸದಸ್ಯರುಗಳಾಗಿ ಕಾಂ. ಎಂ. ಎನ್. ಉಗ್ರಪ್ಪ, ಕಾಂ. ಸೋಮಸುಂದರ ಶರ್ಮ ಮತ್ತು ವಿಶ್ವನಾಥ ರಾವ್ ಆಯ್ಕೆಯಾಗಿದ್ದಾರೆ. ●

ಆರ್ಥಿಕ ಸಮೀಕ್ಷೆ:

ಆರ್. ಚಂದ್ರ

ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿಯೂ ಇಲ್ಲ!

ಹೆಚ್ಚುತ್ತಿರುವ ಕೃಷಿಕಾರ್ಮಿಕರು

ನಮ್ಮ ದೇಶದಲ್ಲಿ ಭೂರಹಿತ ಕೃಷಿ ಕಾರ್ಮಿಕರ ಸಂಖ್ಯೆ ಹೆಚ್ಚುತ್ತಲೇ ಇದೆ. 1961ರಲ್ಲಿ ಇವರ ಸಂಖ್ಯೆ 29.89 ಮಿಲಿಯವಿದ್ದುದು, 1971 ರಲ್ಲಿ 44.22 ಮಿಲಿಯಕ್ಕೇರಿತು. 1978ರಲ್ಲಿ ಇವರ ಸಂಖ್ಯೆ 58 ಮಿಲಿಯಕ್ಕೇರಿರುವುದಾಗಿ ತಿಳಿದು ಬಂದಿದೆ. (ಭೂತಲಿಂಗಂ ವರದಿ : 1978) ಅಷ್ಟಲ್ಲದೆ, ಗ್ರಾಮೀಣ ಜನರಲ್ಲಿ ಶೇ. 35ರಷ್ಟು ವ್ಯವಸಾಯಗಾರರಿಗೆ 1 ಎಕರೆಗಿಂತಲೂ ಕಡಿಮೆ ಹೊಲವಿರುವುದರಿಂದ ಅವರೂ ವರ್ಷದಲ್ಲಿ ಬಹುಪಾಲು ಕೃಷಿಕೂಲಿ ಮಾಡಿಕೊಂಡೇ ಬದುಕಬೇಕಾಗಿದೆ. ಹಾಗೆಯೇ, ಇನ್ನೂ ಶೇ. 35ರಷ್ಟು ರೈತರು 1ರಿಂದ 5 ಎಕರೆಗಳೊಳಗಿನ ವಿಸ್ತೀರ್ಣದ ಹಿಡುವಳಿದಾರರಾಗಿರುವುದರಿಂದ ಅವರೂ ಅಲ್ಪಸ್ವಲ್ಪ ಕೃಷಿ ಕೂಲಿಮಾಡಿಕೊಂಡು ಬದುಕಬೇಕಾಗಿದೆ. ಕಾರಣ, ಈ ಸಣ್ಣ ಹಿಡುವಳಿಗಳ ಬಡರೈತರಿಗೆ ತಮ್ಮ ಹೊಲದಿಂದ ಸಿಗುವ ಉತ್ಪಾದನೆಯಿಂದಲೇ ಜೀವನ ಸಾಗಿಸುವುದು ಕಷ್ಟಸಾಧ್ಯವಾಗುತ್ತದೆ. ಅನಿವಾರ್ಯವಾಗಿ ಅವರು ಶ್ರೀಮಂತ ರೈತರ ಹಾಗೂ ದೊಡ್ಡ ಭೂಮಾಲಕರ ಹೊಲಗಳಲ್ಲಿ ಕೃಷಿಕೂಲಿ ಮಾಡಬೇಕಾಗುತ್ತದೆ.

ಶೋಷಿತ ಪರಿಶಿಷ್ಟ ಜಾತಿಗಳು, ಪಂಗಡಗಳು

1971ರ ಜನಗಣತಿಯಂತೆ, ದೇಶದ ಸುಮಾರು 550 ಮಿಲಿಯ ಜನಸಂಖ್ಯೆಯಲ್ಲಿ ಸುಮಾರು 440 ಮಿಲಿಯ (ಶೇ. 80) ಜನರು ಹಳ್ಳಿಗಳಲ್ಲಿರುವವರು. ಒಟ್ಟು ಜನಸಂಖ್ಯೆಯಲ್ಲಿ 80 ಮಿಲಿಯ ಜನರು ಪರಿಶಿಷ್ಟ ಜಾತಿಗಳಿಗೆ ಸೇರಿದವರು, 38ಮಿಲಿಯ ಜನರು ಪರಿಶಿಷ್ಟ ಪಂಗಡಗಳಿಗೆ ಸೇರಿದವರು (ಒಟ್ಟು ಶೇ. 22) ಒಟ್ಟು 118 ಮಿಲಿಯ ಪರಿಶಿಷ್ಟ ಜಾತಿಗಳಿಗೂ ಪರಿಶಿಷ್ಟ ಪಂಗಡಗಳಿಗೂ ಸೇರಿದ ಜನರಲ್ಲಿ 107 ಮಿಲಿಯ ಜನರು (ಶೇ. 90) ಹಳ್ಳಿಗಳಲ್ಲಿರುವವರು. ಒಟ್ಟು ಗ್ರಾಮೀಣ ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಗಳಿಗೂ ಪರಿಶಿಷ್ಟ ಪಂಗಡಗಳಿಗೂ ಸೇರಿರುವ ಜನಸಂಖ್ಯೆಯು ಶೇ.25ರಷ್ಟಿರುವುದು. ಇವರಲ್ಲಿ ಬಹುಪಾಲು ಜನರು ಭೂರಹಿತ ಕೃಷಿಕಾರ್ಮಿಕರು, ಉಳಿದವರು ಸಣ್ಣಹಿಡುವಳಿಗಳಿರುವ ಬಡರೈತರು-ಅವರೂ ತಮ್ಮ ಜೀವನ ನಿರ್ವಹಣೆಗಾಗಿ ಶ್ರೀಮಂತರ ಹೊಲಗಳಲ್ಲಿ ಕೂಲಿ ಮಾಡಬೇಕಾಗುವುದು. ಈ ದಲಿತ ಜನರು ಶತಮಾನಗಳಿಂದ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕವಾಗಿ, ಮೇಲ್ವರ್ಗದವರಿಂದ-ಮೇಲ್ಜಾತಿಯವರಿಂದ ತೀವ್ರ ತುಳಿತಕ್ಕೊಳಗಾದವರು, ನಿರಕ್ಷರಸ್ಥರು, ಬಡತನ ರೇಖೆಗಿಂತಲೂ ಕೆಳಮಟ್ಟದಲ್ಲಿರುವ ದಟ್ಟದರಿದ್ರರು ಹಾಗೂ ಕಡುಬಡವರು. ಇವರಲ್ಲಿ ಬಹುಪಾಲು ಜನರು ಅಸಂಘಟಿತರು, ಆದುದರಿಂದಲೇ ಅತ್ಯಂತ ಶೋಷಿತರು.

ಈ ದಲಿತರ ಕುಟುಂಬಗಳಲ್ಲಿ ಗಂಡಸರೂ, ಹೆಂಗಸರೂ, ಮಕ್ಕಳೂ ಎಲ್ಲರೂ ದುಡಿಯುವವರೇ. ಆದರೆ, ಅತ್ಯಲ್ಪ ಆದಾಯದಿಂದ ಅವರ ಜೀವನ ಅತ್ಯಂತ ದಾರುಣವಾಗಿದೆ. ಆರೋಗ್ಯ, ವಸತಿ, ಶಿಕ್ಷಣ, ಕುಡಿಯುವ ನೀರು, ಇತ್ಯಾದಿ ಸೌಕರ್ಯಗಳು ಈ ಬಡಜನರನೇಕರಿಗೆ ಇನ್ನೂ ತಲುಪಲೇ ಇಲ್ಲ. ಇವರು ಬಡ್ಡಿ ವ್ಯಾಪಾರಿಗಳ ಮತ್ತು ಭೂಮಾಲಕರ ಸಾಲ ಸಹಾಯಗಳ ಋಣಕ್ಕೆ ಬಲಿಯಾಗಿ ಅನೇಕರು ಜೀತದಾಳುಗಳಾಗಿ ದುಡಿಯುತ್ತಿದ್ದಾರೆ. ಸಣ್ಣ ಹಿಡುವಳಿಗಳ ಬಡರೈತರು ಸಾಕಷ್ಟು ಸಾಲ ಸಹಾಯಗಳಿಲ್ಲದೆ, ಉತ್ಪಾದನೆಗಳಿಗೆ ಯೋಗ್ಯ ಪ್ರತಿಫಲ ಸಿಗದೆ, ಶ್ರೀಮಂತ ರೈತರ ಹಾಗೂ ದೊಡ್ಡ ಭೂಮಾಲೀಕರ ದಾಳಿದಬ್ಬಾಳಿಕೆ ದೌರ್ಜನ್ಯಗಳನ್ನು ಸಹಿಸಲಾರದೆ, ವ್ಯವಸಾಯ ಬಿಟ್ಟು ಕೃಷಿಕೂಲಿಕಾರರ ಸಾಲಿಗೆ ಸೇರುತ್ತಿದ್ದಾರೆ. ವರ್ಷದ ಎಲ್ಲಾ ದಿನಗಳಲ್ಲಿ ಇವರಿಗೆ ಕೆಲಸ ಸಿಗದೆ ಇರುವುದರಿಂದ ಇವರಲ್ಲಿ ಅನೇಕರು ಅರೆ ಉದ್ಯೋಗಿಗಳಾಗಿಯೂ ನಿರುದ್ಯೋಗಿಗಳಾಗಿಯೂ ನರಳುತ್ತಿದ್ದಾರೆ. ಹಳ್ಳಿಯ ಜೀವನದ ಕಷ್ಟನಷ್ಟಗಳಿಂದ ಪಾರಾಗಲು ಪಟ್ಟಣಗಳಿಗೆ ವಲಸೆ ಬರುವ ಈ ಬಡಜನರಿಗೆ ಕಾದಿರುವುದು, ನಿರುದ್ಯೋಗ, ಅರೆಉದ್ಯೋಗ, ಕೊಳಚೆ ಪ್ರದೇಶಗಳಲ್ಲಿನ ವಾಸ, ಅಗ್ಗದ ಕೂಲಿ, ಬಡ್ಡಿ ವ್ಯಾಪಾರಿಗಳಿಂದ ಮತ್ತು ಕೈಗಾರಿಕೋದ್ಯಮಿಗಳಿಂದ ಶೋಷಣೆ.

ಕನಿಷ್ಠ ಕೂಲಿಯೂ ಇಲ್ಲ

ಸಮಾಜದಲ್ಲಿ ಅತ್ಯಂತ ದಲಿತರೂ ಬಡವರೂ ಆಗಿರುವ ಮಿಲಿಯಾಂತರ ಕೃಷಿ ಕಾರ್ಮಿಕರ ಕಲ್ಯಾಣಕ್ಕಾಗಿ ಕಾಂಗ್ರೆಸ್ ಘನಸರಕಾರ ತನ್ನ ದೀರ್ಘಾವಧಿ ಆಡಳಿತದಲ್ಲಿ ಏನು ಮಾಡಿದೆ? ಸ್ವಾತಂತ್ರ್ಯ ಸಿಕ್ಕಿ 34 ವರ್ಷಗಳಾದರೂ ಈ ಅಸಂಖ್ಯಾತ ಕೃಷಿ ಕಾರ್ಮಿಕರಿಗೆ ಕನಿಷ್ಟ ಕೂಲಿಯೂ ಸಿಗುತ್ತಿಲ್ಲ!

1948ರಲ್ಲಿ ಕನಿಷ್ಠ ಕೂಲಿ ಕಾಯಿದೆ ಏನೋ ಸಂಸತ್ತಿನಲ್ಲಿ ಅಂಗೀಕಾರವಾಯಿತು. ಆದರೆ, ಕೃಷಿಕಾರ್ಮಿಕರೂ ಸೇರಿದಂತೆ ಹೆಚ್ಚಿನ ಅಸಂಘಟಿತ ಕಾರ್ಮಿಕರಿಗೆ ಜೀವನ ವೆಚ್ಚಕ್ಕನುಗುಣವಾಗಿ, ಬೆಲೆ ಏರಿಕೆಗನುಗುಣವಾಗಿ, ಬಡತನರೇಖೆಗಿಂತ ಮೇಲ್ಮಟ್ಟದ ಜೀವನ ನಡೆಸಲನುಗುಣವಾಗಿ ಕನಿಷ್ಠ ಕೂಲಿಯನ್ನು ಕೇಂದ್ರ ಸರ್ಕಾರವಾಗಲೀ, ಹೆಚ್ಚಿನ ರಾಜ್ಯ ಸರಕಾರಗಳಾಗಲೀ ನಿರ್ಧರಿಸಲು ಮತ್ತು ಜಾರಿಗೆ ತರಲು ಸೋತಿವೆ. ಕನಿಷ್ಠ ಕೂಲಿಯನ್ನು ಧನಿಯು ಕೂಲಿಕೊಡುವ ಸಾಮರ್ಥ್ಯವನ್ನವಲಂಬಿಸದೆ, ಕೂಲಿಕಾರನ ಕನಿಷ್ಠ ಜೀವನಾವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು ನಿರ್ಧರಿಸಬೇಕಾಗಿದೆ. ಕನಿಷ್ಠ ಕೂಲಿ ಕೊಡದೆ ಯಾರನ್ನಾದರೂ ದುಡಿಸಿಕೊಳ್ಳುವುದು ಕಾಯಿದೆ ಪ್ರಕಾರ ಅಪರಾಧವಾಗುತ್ತದೆ. ಆದರೆ, ಇಂತಹ ಅಪರಾಧಗಳಿಗೆ ಧನಿಯುವರಿಗೆ-ಯಜಮಾನರಿಗೆಶಿಕ್ಷೆಯಾದುದಾಗಲೀ, ಜುಲುಮಾನೆಯಾದುದಾಗಲೀ ನಮಗೆ ತಿಳಿದಿಲ್ಲ. ಬದಲು ಯಜಮಾನರಿಗೆ-ಮಾಲಕರಿಗೆ ತೃಪ್ತಿಕರವಾಗಿಕೆಲಸ ಮಾಡಲಿಲ್ಲ ಎಂಬ ನೆಪದಿಂದ ಕೆಲಸದವರನ್ನು ಹೊಡೆದು ಬಡಿದು ಕೂಲಿ ಕೊಡದೆ ಕೆಲಸದಿಂದ ಕಿತ್ತು ಓಡಿಸಿರುವ ಘಟನೆಗಳೇ ಹೆಚ್ಚಾಗಿವೆ. ಎಡಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಪ್ರಬಲವಾಗಿರುವ ಪ. ಬಂಗಾಳ, ತ್ರಿಪುರಾ ಹಾಗೂ ಕೇರಳ ರಾಜ್ಯಗಳನ್ನುಳಿದು ಇತರ ರಾಜ್ಯ ಸರಕಾರಗಳು ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನ ನಿರ್ಧರಿಸಲು ಮತ್ತು ಕಾಲಕಾಲಕ್ಕೆ ಪರಿಷ್ಕರಿಸಲು ಹಿಂದೇಟು ಹಾಕುತ್ತಿವೆ. ಶ್ರೀಮಂತ ರೈತರ ಮತ್ತು ದೊಡ್ಡ ಭೂಮಾಲಕರ ಹಿತದೃಷ್ಟಿಯಿಂದ ಈ ರಾಜ್ಯ ಸರಕಾರಗಳು ಕೃಷಿ ಕಾರ್ಮಿಕರಿಗೆ ಕನಿಷ್ಠಕೂಲಿ ಪರಿಷ್ಕರಿಸುವುದರಿಂದ ಕೃಷಿ ಉತ್ಪಾದನೆಯು ಹೆಚ್ಚಳಕ್ಕೆ ತೊಂದರೆಯಾಗುವುದೆಂಬ ವಾದ ಹೂಡುತ್ತಿವೆ. ಏರಿಕೆಯ ದರದಲ್ಲಿ ಕೃಷಿಕೂಲಿಕಾರರಿಗೆ ಕನಿಷ್ಠಕೂಲಿ ಕೊಡಲು ಶ್ರೀಮಂತ ರೈತರೂ ದೊಡ್ಡ ಭೂಮಾಲಕರೂ ಅಸಮರ್ಥರೆಂದು ಈ ರಾಜ್ಯ ಸರಕಾರಗಳು ವಾದಿಸುತ್ತಿವೆ! ಕೃಷಿ ಕಾರ್ಮಿಕರೂ ಬಡರೈತರೂ ಸಂಘಟಿತರಾಗಿ ಕನಿಷ್ಠ ಕೂಲಿ ಏರಿಕೆಗೆ ಹೋರಾಟ ನಡೆಸಿದರೆ, ಈ ರಾಜ್ಯ ಸರಕಾರಗಳು ಬಲಪ್ರಯೋಗದಿಂದ, ಜಾತಿ ಧರ್ಮಗಳ ಭೇದಭಾವ ಪ್ರಚೋದನೆಯಿಂದ ಅವರ ಹೋರಾಟದ ಮತ್ತು ಸಂಘಟನೆಯ ಸದ್ದಡಗಿಸಲು ಮುಂದಾಗುತ್ತವೆ!

ಕೂಲಿಯು ನಿಜಮೌಲ್ಯದಲ್ಲಿ ಇಳಿಮುಖ

ಪರಿಣಾಮ? ಕೇಂದ್ರ ಕಾರ್ಮಿಕ ಉದ್ಯೋಗ ಮಂತ್ರಿ ಶಾಖೆಯ ಇತ್ತೀಚೆಗಿನ ಒಂದು ವರದಿಯಂತೆ 1964-65 ರಿಂದ 1974-75ರ ಅವಧಿಯಲ್ಲಿ ಕೃಷಿಕಾರ್ಮಿಕರ ಸರಾಸರಿ ದಿನ ಕೂಲಿಯು ರೂ. 1.43 ರಿಂದ ರೂ. 3.24ಕ್ಕೆ ಏರಿದ್ದರೂ, ಅಂದರೆ ಶೇ. 128ರಷ್ಟು ಹೆಚ್ಚಿದ್ದರೂ, ಅವರ ಆದಾಯದ ನಿಜ ಮೌಲ್ಯವು ಹಣದುಬ್ಬರ ಹಾಗೂ ಬೆಲೆ ಏರಿಕೆಯಿಂದಾಗಿ ಶೇ. 12ರಷ್ಟು ಕಡಿಮೆಯಾಗಿದೆ. ಕೃಷಿಕಾರ್ಮಿಕರ ಕೂಲಿ ಮಟ್ಟವು ಇತರ ಕಾರ್ಮಿಕರ ಕೂಲಿಮಟ್ಟಕ್ಕಿಂತ ಬಹಳ ಕಡಿಮೆ ಆಗಿದೆ. ವ್ಯಾಪಕವಾದ ಗ್ರಾಮೀಣ ನಿರುದ್ಯೋಗ, ಅರೆ ಉದ್ಯೋಗಗಳಿಂದಾಗಿ ಕೃಷಿಕಾರ್ಮಿಕರ ಕೂಲಿದರಗಳು ತೀರಾ ಕೆಳಮಟ್ಟದಲ್ಲಿಯೇ ಇವೆ.

ಘೋಷಣೆಗೂ ಆಚರಣೆಗೂ ಅಂತರ

ಕೃಷಿಕಾರ್ಮಿಕರ ಕನಿಷ್ಠಕೂಲಿಯನ್ನು ಕೂಡಲೇ ಅನುಷ್ಠಾನಕ್ಕೆ ತರುವುದು ಮತ್ತು ಕಾಲಕಾಲಕ್ಕೆ ಅದನ್ನು ಜೀವನ ವೆಚ್ಚಕ್ಕನುಗುಣವಾಗಿ ಪರಿಷ್ಕರಿಸುವುದು 1975ರಲ್ಲಿ ತುರ್ತುಪರಿಸ್ಥಿತಿಯಲ್ಲಿ ಘೋಷಿಸಿದ 20- ಅಂಶಗಳ ಆರ್ಥಿಕ ಕಾರ್ಯಕ್ರಮಗಳಲ್ಲಿ ಒಂದು. ಆದರೆ, ಘೋಷಣೆಗೂ ಆಚರಣೆಗೂ ಅಜಗಜಾಂತರ!

19 0ರ ದಶಕದ ಮಧ್ಯ ಭಾಗದಲ್ಲಿ ಕೃಷಿಕಾರ್ಮಿಕರ ಕನಿಷ್ಠಕೂಲಿಯನ್ನು ಪರಿಷ್ಕರಿಸಲಾಗಿತ್ತು. ಮುಂದೆ ರಾಜ್ಯ ಕಾರ್ಮಿಕ ಮಂತ್ರಿಗಳ ವಾರ್ಷಿಕ ಅಧಿವೇಶನಗಳಲ್ಲಿ ಕೃಷಿ ಕಾರ್ಮಿಕರ ಕನಿಷ್ಠ ಕೂಲಿಯನ್ನು ಎರಡು ವರ್ಷಗಳಿಗೊಮ್ಮೆ ಪರಿಷ್ಕರಿಸಬೇಕೆಂದು ಹಲವು ಬಾರಿ ನಿರ್ಣಯಿಸಿದ್ದರೂ ಹೆಚ್ಚಿನ ರಾಜ್ಯಗಳು ಆ ನಿರ್ಣಯವನ್ನು ಜಾರಿಗೆ ತರಲೇ ಇಲ್ಲ. ಕನಿಷ್ಠ ಕೂಲಿ ಕಾಯಿದೆಯಂತೆ 5ವರ್ಷಗಳಿಗೊಮ್ಮೆ ಕನಿಷ್ಠ ಕೂಲಿ ಪರಿಷ್ಕರಿಸಬಹುದು. ಹೆಚ್ಚಿನ ರಾಜ್ಯ ಸರಕಾರಗಳು ಇದರ ಲಾಭ ಪಡೆಯುತ್ತಿವೆ. ಹಾಗೆಯೇ, ಕೃಷಿಕಾರ್ಮಿಕರ ಕನಿಷ್ಠಕೂಲಿಯನ್ನು ಗ್ರಾಹಕರ ಬೆಲೆ ಸೂಚಿಗೆ ಹೊಂದಿಸಬೇಕೆಂಬ ಕೇಂದ್ರ ಸರಕಾರದ ಸಲಹೆಯನ್ನು ಹೆಚ್ಚಿನ ರಾಜ್ಯ ಸರ್ಕಾರಗಳು ತಿರಸ್ಕರಿಸಿವೆ. ಯೋಜನಾ ಆಯೋಗದ ಇತ್ತೀಚೆಗಿನ ಅಧ್ಯಯನದಂತೆ (Indian Express : 24-5-81) ಹೊಸತಾಗಿ ಅಧಿಕಾರಕ್ಕೆ ಬಂದ ಕೇವಲ ನಾಲ್ಕು ರಾಜ್ಯ ಸರ್ಕಾರಗಳು-ಆಂಧ್ರ ಪ್ರದೇಶ, ಹಿಮಾಚಲ ಪ್ರದೇಶ, ಮೇಘಾಲಯ, ಒರಿಸ್ಸಾ-ಕೃಷಿಕಾರ್ಮಿಕರ ಕನಿಷ್ಠ ಕೂಲಿಯನ್ನು ಪರಿಷ್ಕರಿಸಿವೆ. ಉತ್ತರ ಪ್ರದೇಶವೂ ಇತ್ತೀಚೆಗೆ ಕನಿಷ್ಠ ಕೂಲಿಯನ್ನು ಪರಿಷ್ಕರಿಸಿದೆ. ಅಸ್ಸಾಂ ಸರಕಾರ ಈ ದಿಸೆಯಲ್ಲಿ ತನ್ನ ಸಲಹೆಯನ್ನು ಕೇಂದ್ರಕ್ಕೆ ಕಳಿಸಿಕೊಟ್ಟಿದೆ.

ಪಂಜಾಬ್ ರಾಜ್ಯದಲ್ಲಿ ಮಾತ್ರ ಕನಿಷ್ಠ ಕೂಲಿಯನ್ನು ಗ್ರಾಹಕರ ಬೆಲೆ ಸೂಚಿಗೆ ಹೊಂದಿಸಲಾಗಿದೆ. ಪ. ಬಂಗಾಳದಲ್ಲಿ ಕನಿಷ್ಠ ಕೂಲಿಗೆ ತುಟ್ಟಿ ಭತ್ಯೆ ಸಿಗುತ್ತಿದೆ.

ಇಂದಿರಾ ಕಾಂಗ್ರೆಸ್‌ನ ಭದ್ರಕೋಟೆಯಾದ ಆಂಧ್ರಪ್ರದೇಶದಲ್ಲಿ 1981ರ ಫೆಬ್ರವರಿಯಲ್ಲಿ ಕೃಷಿ ಕಾರ್ಮಿಕರ ಕನಿಷ್ಠ ಕೂಲಿ ಪರಿಷ್ಕರಿಸಲಾಯಿತು. ಆದರೆ, ಕಳೆದ ಆರು ವರ್ಷಗಳ ಹಣದುಬ್ಬರಕ್ಕೆ ಹೋಲಿಸಿದರೆ ಹೊಸ ಕನಿಷ್ಠ ಕೂಲಿಯು ಬಹಳ ಕೆಳಮಟ್ಟದಲ್ಲಿದೆ. ಈ ಕನಿಷ್ಠ ಕೂಲಿ 1970ರ ದಶಕದ ಮಧ್ಯದಲ್ಲಿ ಕೆಲವು ರಾಜ್ಯಗಳಲ್ಲಿ ಪರಿಷ್ಕೃತವಾದ ಕನಿಷ್ಠಕೂಲಿಗಿಂತಲೂ ಕೆಳಮಟ್ಟದಲ್ಲಿದೆ!

ಕನಿಷ್ಠ ಕೂಲಿ ಪರಿಷ್ಕರಿಸಲು ಕಾಂಗ್ರೆಸ್ (ಐ) ಆಡಳಿತವಿರುವ ಹೆಚ್ಚಿನ ರಾಜ್ಯ ಸರಕಾರಗಳು ಹಿಂದೆ ಬಿದ್ದಿವೆ. ಆದರೆ, ಶ್ರೀಮಂತ ರೈತರಿಗೂ ದೊಡ್ಡ ಭೂಮಾಲಕರಿಗೂ ಅನುಕೂಲವಾಗುವಂತೆ ಮಾರುಕಟ್ಟೆಗೆ ಮೀಸಲಾಗಿರುವ ಅವರ ಹೆಚ್ಚುವರಿ ಫಸಲಿಗೆ ಏರಿಕೆಯ ಬೆಲೆ ನಿರ್ಧರಿಸಲು ಈ ರಾಜ್ಯ ಸರ್ಕಾರಗಳು ಮುಂದೆ ಬಂದಿವೆ!

ಕೆಲವು ರಾಜ್ಯಗಳಲ್ಲಿನ ಕೃಷಿ ಕಾರ್ಮಿಕರ ಸದ್ಯದ ಕನಿಷ್ಠ ದಿನ ಕೂಲಿ ದರಗಳು ಹೀಗಿವೆ. ಕರ್ನಾಟಕ : ರೂ. 3-25, ಅತ್ಯಂತ ಕೆಳಮಟ್ಟದಲ್ಲಿದೆ, 1975ರ ನಂತರ ಪರಿಷ್ಕರಣವಾಗಲಿಲ್ಲ. ಆಂಧ್ರ ಪ್ರದೇಶ : ರೂ. 4-50 ಯಿಂದ ರೂ. 10/-. ಬಿಹಾರ : ರೂ. 4.50, 1975ರಲ್ಲಿ ನಿರ್ಧರಿಸಿದ್ದು. ಹರಿಯಾಣ : ರೂ. 9 ರಿಂದ ರೂ. 12 (ರೂ. 7.50 ಯಿಂದ ರೂ. 10 - ಊಟ ಕೊಟ್ಟು), ಜನವರಿ 1980ರಲ್ಲಿ ಜನತಾ ಸರಕಾರವಿರುವಾಗ ನಿರ್ಧರಿಸಿದ್ದು). ಪಶ್ಚಿಮ ಬಂಗಾಳ : ರೂ. 5.65 (1976-77), ರೂ. 6.75 (79-80), ಪಂಜಾಬ್ : ರೂ. 8.70 (ರೂ. 6.70-ಊಟ ಕೊಟ್ಟು), ಜನವರಿ 1979ರಲ್ಲಿ ನಿರ್ಧರಿಸಿದ್ದು.

ಕಾರ್ಮಿಕವಿರೋಧಿ ಧೋರಣೆ

ಸಂಘಟಿತ ಕಾರ್ಮಿಕರನ್ನು "ಅಧಿಕ ವೇತನದ ದ್ವೀಪದವರು" (high wage Islanders) ಎಂದು ಟೀಕಿಸಿ ಅವರು ಬೋನಸ್, ವೇತನ ಹೆಚ್ಚಳ, ತುಟ್ಟಿಭತ್ತೆಗಾಗಿ ನಡೆಸುತ್ತಿರುವ ಹೋರಾಟಗಳನ್ನು ಹತ್ತಿಕ್ಕಲು ಇಂದಿರಾ ಸರಕಾರ ಸತತ ಪ್ರಯತ್ನ ಮಾಡುತ್ತಿದೆ. ಮುಷ್ಕರಗಳನ್ನು ನಿಷೇಧಿಸುವ ಮತ್ತು ವಿಚಾರಣೆ ಇಲ್ಲದೆ ದಸ್ತಗಿರಿಮಾಡುವ ಕರಾಳ ಶಾಸನಗಳನ್ನು ಜಾರಿಗೆ ತಂದಿದೆ. ಕೇಂದ್ರ ಸರಕಾರದ ನೌಕರರ ತುಟ್ಟಿಭತ್ತೆಯನ್ನು ತಡೆಹಿಡಿದಿದೆ, ಕಡ್ಡಾಯ ಠೇವಣಿ

(6ನೇ ಪುಟ ನೋಡಿ)

ಚೀನಾ ಕಮ್ಯೂನಿಸ್ಟ್ ಪಕ್ಷದಿಂದ

ಮಾವೋ ನಾಯಕತ್ವದ ವಿಮರ್ಶೆಯನ್ನು ಕುರಿತು

[ಜೂನ್ ತಿಂಗಳ ಕೊನೆಯ ವಾರದಲ್ಲಿ ಚೀನೀ ಕಮ್ಯೂನಿಸ್ಟ್ ಪಕ್ಷದ ಕೇಂದ್ರಸಮಿತಿಯ ಪ್ಲೀನರಿ ಅಧಿವೇಶನವೊಂದು ಜರುಗಿತು. ಅದರಲ್ಲಿ "ಪಕ್ಷದ ಚರಿತ್ರೆಯ ಪ್ರಶ್ನೆಯನ್ನು ಕುರಿತು" ಎಂಬ ದೀರ್ಘ ನಿರ್ಣಯವೊಂದನ್ನು ಅಂಗೀಕರಿಸಲಾಯಿತು. 1949ರಿಂದ ಅಂದರೆ ಆ ವರ್ಷದ ಅಕ್ಟೋಬರ್‌ನಲ್ಲಿ ನವ ಜನತಾಂತ್ರಿಕ ಕ್ರಾಂತಿ ಜಯಗಳಿಸಿ ಚೀನಾ ಜನತಾ ಗಣರಾಜ್ಯ ಸ್ಥಾಪಿತವಾದಂದಿನಿಂದ ಇದುವರೆಗಿನ ಸಾಧನೆ ಹಾಗೂ ವೈಫಲ್ಯಗಳ ಮೌಲ್ಯೀಕರಣವನ್ನು ಈ ನಿರ್ಣಯದಲ್ಲಿ ಮಾಡಲಾಗಿದೆ. ಇದನ್ನು ಕುರಿತಾದ ಎಂ. ಬಸವಪುನ್ನಯ್ಯನವರ ಲೇಖನದ ಸಾರಾಂಶ ಇಲ್ಲಿದೆ.]

ಚೀನಾ ಕಮ್ಯೂನಿಸ್ಟ್ ಪಕ್ಷ ಜುಲೈ 1, 1981ರಂದು ತನ್ನ ಅರವತ್ತನೇ ವಾರ್ಷಿಕೋತ್ಸವವನ್ನು ಆಚರಿಸಿತು. 1921ರಲ್ಲಿ ಸ್ಥಾಪನೆಗೊಂಡ ಪಕ್ಷದ ಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿದ್ದು 1935ರಿಂದ 1976ರ ವರೆಗೆ ಪಕ್ಷದ ಮುಖ್ಯಸ್ಥರಾಗಿದ್ದ ಮಾವೋ ಜೆಡೊಂಗ್‌ರ ಪಾತ್ರದ ವಿಮರ್ಶೆ ಸ್ವಾಭಾವಿಕವಾಗಿಯೇ ಈ ನಿರ್ಣಯದಲ್ಲಿ ಪ್ರಮುಖ ಸ್ಥಾನ ಪಡೆದಿದೆ.

ಚೀನಾದ ಕ್ರಾಂತಿ ಹಾಗೂ ಜನತಾ ಚೀನಾದ ಸಮಾಜವಾದೀ ರಚನೆಯಲ್ಲಿ ಮಾವೋ ಜೆಡೊಂಗ್‌ರ ಪಾತ್ರ ಜಾಗತಿಕ ಕಮ್ಯೂನಿಸ್ಟ್ ಚಳುವಳಿಯಲ್ಲಿ ಈಗ ಒಂದು ವಿವಾದಾತ್ಮಕ ವಿಷಯವಾಗಿದೆ. 20ನೇ ಶತಮಾನದಲ್ಲಿ ಜಗತ್ತನ್ನೇ ನಡುಗಿಸಿದ ನಾಲ್ಕು ಘಟನೆಗಳಲ್ಲಿ (1917ರಲ್ಲಿ ರಷ್ಯಾದ ಸಮಾಜವಾದೀ ಕ್ರಾಂತಿ, ಸೋವಿಯೆಟ್ ಸಂಘ ಹಾಗೂ ಅದರ ಮಿತ್ರರಿಗೆ ಫ್ಯಾಸಿಸ್ಟ್ ವಿರೋಧೀ ಯುದ್ಧದಲ್ಲಿ ಸಿಕ್ಕ ಗೆಲುವು, ಚೀನಾದ ಕ್ರಾಂತಿಯ ವಿಜಯ ಹಾಗೂ ವಿಯೆಟ್ನಾಂನಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಸೋಲು ಮತ್ತು ವಿಯೆಟ್ನಾಂ ಜನತೆಯ ರಾಷ್ಟ್ರೀಯ ವಿಮೋಚನೆ) ಒಂದಾದ ಯಶಸ್ವೀ ಚೀನೀ ಕ್ರಾಂತಿಯ ಪ್ರಮುಖ ನಾಯಕರಾಗಿದ್ದ ಮಾವೋ ಜೆಡೊಂಗ್‌ರ ಪಾತ್ರ, ಅವರ ಸೈದ್ಧಾಂತಿಕ ಮತ್ತು ರಾಜಕೀಯ ಬರವಣಿಗೆಗಳು ಹಾಗೂ ಚಟುವಟಿಕೆಗಳ ಪರಿಶೀಲನೆ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷಕ್ಕೆ ಬಹಳ ಆಸಕ್ತಿಯಿದೆ. ಯಾಕೆಂದರೆ ಈ ರೀತಿಯ ಮಾರ್ಕ್ಸ್‌ವಾದೀ-ಲೆನಿನ್‌ವಾದೀ ಮೌಲ್ಯೀಕರಣದಿಂದ ಸರಿಯಾದ ಪಾಠ ಕಲಿತು ನಮ್ಮ ಕ್ರಾಂತಿಕಾರೀ ಚಳುವಳಿಯಲ್ಲಿ ತಪ್ಪುಗಳನ್ನು ಮಾಡದಿರಲು ಇದು ಉಪಯುಕ್ತವಾಗುತ್ತದೆ. ಇಂತಹದೊಂದು ತೀರಾ ಕ್ಲಿಷ್ಟವಾದ ವಿಮರ್ಶೆಯನ್ನು ನಡೆಸಲು ಚೀನಾ ಕಮ್ಯೂನಿಸ್ಟ್ ಪಕ್ಷವೇ ಎಲ್ಲಕ್ಕಿಂತ ಅರ್ಹವೆನ್ನುವುದು ನಿಸ್ಸಂಶಯ. ಯಾಕೆಂದರೆ ಆ ಬಗ್ಗೆ ಸಂಪೂರ್ಣ ವಿವರ ಅವರಲ್ಲಿದೆ. ಅದರರ್ಥ ಆ ಪಕ್ಷದ ವಿಶ್ಲೇಷಣೆ ಮಾತ್ರವೇ ಸಂಪೂರ್ಣ ಸರಿ, ವಸ್ತುನಿಷ್ಠ ಹಾಗೂ ಮಾರ್ಕ್ಸ್‌ವಾದೀ-ಲೆನಿನ್‌ವಾದೀ ಎಂದು ಹೇಳುವುದು ಸಾಧ್ಯವಿಲ್ಲ. ಪ್ರತಿಯೊಂದು ಕಮ್ಯೂನಿಸ್ಟ್ ಪಕ್ಷಕ್ಕೂ ತನ್ನದೇ ಆದ ಸ್ವತಂತ್ರ ಮೌಲ್ಯೀಕರಣ ನಡೆಸುವ ಹಕ್ಕು ಇದೆ. ಚೀನಾ ಕಮ್ಯೂನಿಸ್ಟ್ ಪಕ್ಷ ನಮ್ಮ ಪಕ್ಷದ ವಿರುದ್ಧ ನಡೆಸಿದ ಶತ್ರುತ್ವ ತುಂಬಿದ ಚಟುವಟಿಕೆಗಳು ನಮ್ಮ ವೈಜ್ಞಾನಿಕ ದೃಷ್ಟಿಕೋಣಕ್ಕೆ ಅಡ್ಡಿ ತರದಂತೆ ಪ್ರಯತ್ನಿಸುತ್ತಾ ಚೀನಾದ ಪಕ್ಷದ ಕೇಂದ್ರಸಮಿತಿ 'ಸಾಂಸ್ಕೃತಿಕ ಕ್ರಾಂತಿ' ಬಗ್ಗೆ ಮಾಡಿದ ವಿಮರ್ಶೆಯ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತೇವೆ.

ಗಮನಾರ್ಹ ಯಶಸ್ಸು

ಆರಂಭದಲ್ಲಿ, ಸಮಾಜವಾದೀ ಚೀನಾ ಎಲ್ಲಾ ರಂಗಗಳಲ್ಲಿ ಪ್ರಮುಖ ಯಶಸ್ಸನ್ನು ಗಳಿಸಿದೆಯೆಂದು ಕೇಂದ್ರ ಸಮಿತಿಯ ನಿರ್ಣಯದಿಂದ ತಿಳಿದು ನಮ್ಮ ಸಮಾಧಾನ ಹಾಗೂ ಸಂತೋಷವನ್ನು ವ್ಯಕ್ತಪಡಿಸಬಯಸುತ್ತೇವೆ. ಜಗತ್ತಿನ ನಾಲ್ಕನೇ ಒಂದು ಭಾಗ ಜನಸಂಖ್ಯೆ ಹೊಂದಿದ, ಆರ್ಥಿಕವಾಗಿ ಹಿಂದುಳಿದಿದ್ದ ಚೀನಾ ನಡುವೆ ಹತ್ತು ವರ್ಷಗಳ "ಸಾಂಸ್ಕೃತಿಕ ಕ್ರಾಂತಿ"ಯೆಂದೆನಿಸಿಕೊಂಡ ಅವಧಿಯಲ್ಲಿ ತೀವ್ರ ತಪ್ಪುಗಳನ್ನು ಮಾಡಿಯೂ ಕೂಡಾ ಸಾಧಿಸಿದ ಯಶಸ್ಸು ಅಪಾರ. ಈ ಯಶಸ್ಸನ್ನು ಸಾಧ್ಯಗೊಳಿಸಿದ್ದು ಮೂಲಭೂತವಾಗಿ ಚೀನಾದಲ್ಲಿ ಅಸ್ತಿತ್ವಕ್ಕೆ ಬಂದ ಸಮಾಜವಾದೀ ಆಡಳಿತ. ತೀವ್ರ ಆಂತರಿಕ ಯುದ್ಧ ಹಾಗೂ ದೀರ್ಘ ವಿಮೋಚನಾ ಸಮರದ ನಂತರ ಈ ಆಡಳಿತ ಅಸ್ತಿತ್ವಕ್ಕೆ ಬಂದಿತ್ತು. ಎಲ್ಲಾ ಕಮ್ಯೂನಿಸ್ಟರು ಹಾಗೂ ಸಾಚಾ ಸಾಮ್ರಾಜ್ಯಶಾಹೀ-ವಿರೋಧಿಗಳು ಚೀನಾದ ಈ ಸಾಧನೆಗಳಿಂದ ಖುಷಿಪಡಬೇಕು. ಯಾಕೆಂದರೆ ಜಾಗತಿಕ ಸಮಾಜವಾದದ ಬಲವನ್ನು ವೃದ್ಧಿಗೊಳಿಸುವಲ್ಲಿ ಈ ಸಾಧನೆಗಳು ಬಹಳ ಉಪಯುಕ್ತ. ಚೀನೀ ಕಮ್ಯೂನಿಸ್ಟ್ ಪಕ್ಷದ ಗಂಭೀರ ತಪ್ಪುಗಳು ಜನತಾ ಚೀನಾದ ಈ ಸಾಧನೆಗಳನ್ನು ಮೆಚ್ಚುವಲ್ಲಿ ಅಡ್ಡಿಯಾಗಬಾರದು.

ತಪ್ಪುಗಳ ತಿದ್ದುವಿಕೆ

ಚೀನಾ ಕಮ್ಯೂನಿಸ್ಟ್ ಪಕ್ಷದ ರಾಜಕೀಯ, ಸೈದ್ಧಾಂತಿಕ ಹಾಗೂ ಸಂಘಟನಾತ್ಮಕ ಚಟುವಟಿಕೆಗಳಲ್ಲಿ ಕಂಡುಬಂದ ಹಲವು ತಪ್ಪುಗಳನ್ನು ಹಾಗೂ ವಿರೂಪಗಳನ್ನು ತಿದ್ದಿಕೊಳ್ಳಲಾಗುತ್ತಿದೆ. ಇಂತಹ ಪ್ರಯತ್ನಗಳಿಗೆ ನಾವು ಸಂಪೂರ್ಣ ಯಶಸ್ಸು ಕೋರುತ್ತೇವೆ. ತಿದ್ದಿಕೊಳ್ಳಬೇಕಾದ ಇನ್ನೂ ಕೆಲವು ತಪ್ಪುಗಳಿವೆ. ಈ ಹಿಂದೆ ನಮ್ಮ ಪಕ್ಷ ಚೀನಾದ ಪಕ್ಷದ 9ನೇ ಹಾಗೂ 10ನೇ ಸಮ್ಮೇಳನಗಳ ನಿರ್ಧಾರಗಳ ಹಾಗೂ "ಮೂರು ಜಗತ್ತು" ಸಿದ್ಧಾಂತ, ಸಮಾಜವಾದೀ ಸೋವಿಯೆಟ್ ಸಂಘವನ್ನು ಸಾಮಾಜಿಕ-ಸಾಮ್ರಾಜ್ಯಶಾಹಿಯೆನ್ನುವುದು ಇತ್ಯಾದಿಗಳ ಬಗ್ಗೆ ಟೀಕಿಸಿತ್ತು. ಈ ಎಲ್ಲಾ ತಪ್ಪುಗಳು ಹಾಗೂ ಅಡ್ಡದಾರಿಗಳ ಬಗ್ಗೆ ಪುನರ್ವಿಮರ್ಶೆ ನಡೆದು ಸರಿಪಡಿಸಲಾಗುವುದು ಎಂದು ನಾವು ಕಳಕಳಿಯಿಂದ ನಿರೀಕ್ಷಿಸುತ್ತಿದ್ದೇವೆ.

ಚೀನೀ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಪ್ಲೀನರಿ ಅಧಿವೇಶನದ ನಿರ್ಣಯ ತಮ್ಮ ಪಕ್ಷಕ್ಕೆ ಸಮಾಜವಾದೀ ರಚನೆಯಲ್ಲಿ ಸಾಕಷ್ಟು ಅನುಭವವಿಲ್ಲದ ಕಾರಣ ಹಾಗೂ ನಾಯಕರ ವ್ಯಕ್ತಿನಿಷ್ಠ ವಿಶ್ಲೇಷಣೆಗಳಿಂದಾಗಿ ಗಂಭೀರ ತಪ್ಪುಗಳಾಗಿವೆ ಎಂದು ನೇರ ಮಾತುಗಳಲ್ಲಿ ಒಪ್ಪಿಕೊಂಡಿದೆ. ಇದರಲ್ಲಿ ಒಂದೆರಡು ಕೊರತೆಗಳನ್ನು ಹೇಳಬಹುದು. ಮೊದಲನೆಯದಾಗಿ ತಪ್ಪುಗಳನ್ನು ಗುರುತಿಸುವಲ್ಲಿ ಚೀನೀ ಪಕ್ಷದ ನಾಯಕತ್ವ ಬಹಳ ಸಮಯ ತೆಗೆದುಕೊಳ್ಳುತ್ತಿದೆ. ಈ ವಿಳಂಬ ಇನ್ನಷ್ಟು ತಪ್ಪುಗಳಿಗೆ ಕಾರಣವಾಗಬಹುದು. ಎರಡನೇಯದಾಗಿ, ಮಾವೋರ ತಪ್ಪುಗಳನ್ನು ವಿವರಿಸುವ ಈ ನಿರ್ಣಯ ಮಾವೋ ಜೆಡೊಂಗ್ ಈ ತಪ್ಪುಗಳನ್ನು ದೀರ್ಘಕಾಲ ಮುಂದುವರಿಸದಂತೆ, ವ್ಯಕ್ತಿನಿಷ್ಠತೆ,' ಎಡ ದುಸ್ಸಾಹಸವಾದೀ ದಾರಿ ಹಿಡಿಯದಂತೆ ತಡೆಯುವಲ್ಲಿ ಚೀನೀ ಕಮ್ಯೂನಿಸ್ಟ್ ಪಕ್ಷ ಹಾಗೂ ಹೋರಾಟಗಳಿಂದ ಸುದೃಢವಾಗಿದ್ದ ಅದರ ಕೇಂದ್ರ ಸಮಿತಿ ಏಕೆ ವಿಫಲವಾಯಿತೆಂದು ವಿವರಿಸುವಲ್ಲಿ ನಿರ್ಣಯ ಸೋತಿದೆ.

ಗಂಭೀರ ತಪ್ಪುಗಳು

1956ರಿಂದ 1966ರ ದಶಕದ ಬಗ್ಗೆ ಹೇಳುತ್ತಾ ನಿರ್ಣಯ "ಪಕ್ಷದ ಕಾರ್ಯಕಲಾಪಗಳ ಮಾರ್ಗದರ್ಶನದಲ್ಲಿ ಗಂಭೀರ ಲೋಪಗಳು ಹಾಗೂ ತಪ್ಪುಗಳಿದ್ದವು. ತಲುಪಲಾಗದಂತಹ ಗುರಿಗಳು, ಮನಬಂದಂತೆ ನೀಡುವ ನಿರ್ದೇಶನಗಳು, ಜಂಭಕೋರತನ ಇಂತಹವೆಲ್ಲಾ ಎಡ ತಪ್ಪುಗಳಿದ್ದವು. ಮುಖ್ಯವಾಗಿ, ಕಾಮ್ರೇಡ್ ಮಾವೋ ಜೆಡೊಂಗ್ ಹಾಗೂ ಇತರ ಪ್ರಮುಖ ಸಂಗಾತಿಗಳು ತಮ್ಮ ವಿಜಯಗಳಿಂದ ತೀವ್ರ ಉತ್ಸಾಹಿತರಾಗಿದ್ದು ಶೀಘ್ರ ಫಲಿತಾಂಶ ಪಡೆಯಲು ಕಾತುರರಾಗಿದ್ದರು. ಅದ್ದರಿಂದಾಗಿ ಮನುಷ್ಯನ ವ್ಯಕ್ತಿನಿಷ್ಠ ಮನಶಕ್ತಿಯ ಮೌಲ್ಯೀಕರಣವನ್ನು ಸರಿಯಾಗಿ ಮಾಡಲಿಲ್ಲ". ಎಂದು ಒಪ್ಪಿಕೊಂಡಿದೆ. ಪೊಲಿಟಿಕಲ್ ಬ್ಯೂರೋದ ಲೂಶಾನ್ ಸಭೆಯ ನಂತರ ಮಾವೋ ಜೆಡೊಂಗ್‌ರ "ಬಲ ಪಂಥೀಯ ಪರಿಷ್ಕರಣವಾದ"ದ ವಿರುದ್ಧ ಹೋರಾಟ ಎಂಬ ತಪ್ಪು ಸೈದ್ಧಾಂತಿಕ ನಿಲುವಿನಿಂದಾಗಿ ಪಕ್ಷದ ಎಲ್ಲಾ ಮಟ್ಟಗಳಲ್ಲಿ ಹಲವು ಸಂಗಾತಿಗಳೊಂದಿಗೆ ಅನ್ಯಾಯವಾಗಿ ವರ್ತಿಸಲಾಗಿದೆ. ಈ ತಪ್ಪುಗಳೇ ಮುಂದುವರಿದು "ಸಾಂಸ್ಕೃತಿಕ ಕ್ರಾಂತಿ"ಯ ಅವಧಿಯಲ್ಲಿ ಪಕ್ಷದ ಜನತಾಂತ್ರಿಕ ಕೇಂದ್ರವಾದದ ಸಿದ್ಧಾಂತವನ್ನು ಮೂಲೆಗೊತ್ತಿ ವ್ಯಕ್ತಿಪೂಜೆಯ ಆರಂಭಕ್ಕೆ ಕಾರಣವಾಯಿತು ಎಂದೂ ನಿರ್ಣಯ ವಿಶ್ಲೇಷಿಸುತ್ತದೆ.

"ಸಾಂಸ್ಕೃತಿಕ ಕ್ರಾಂತಿ"ಯ ಚರಿತ್ರೆಯಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ ಇದರ ಹಿನ್ನೆಲೆಯಲ್ಲಿದ್ದ ಮಾವೋ ಜೆಡೊಂಗ್‌ರ ಸಿದ್ಧಾಂತ ಮಾರ್ಕ್ಸ್‌ವಾದೀ-ಲೆನಿನ್‌ವಾದೀ ಧೋರಣೆಗಳಿಗೆ ಅನುಗುಣವಾಗಿಯೂ ಇರಲಿಲ್ಲ ಹಾಗೂ ಚೀನೀ ವಾಸ್ತವತೆಗೆ ಸರಿಹೊಂದುವಂತಹದ್ದೂ ಆಗಿರಲಿಲ್ಲ" ಎಂದು ನಿರ್ಣಯ ಹೇಳುತ್ತದೆ.

ಮಾವೋ ಜೆಡೊಂಗ್‌ರ ಮಾರ್ಗದರ್ಶನದಲ್ಲಿ ಅನುಕ್ರಮವಾಗಿ 1969 ಮತ್ತು 1973ರಲ್ಲಿ ನಡೆದ ಪಕ್ಷದ 9ನೇ ಹಾಗೂ 10ನೇ ಸಮ್ಮೇಳನಗಳ ಬಗ್ಗೆ ಹೇಳುತ್ತಾ ಕೇಂದ್ರಸಮಿತಿಯ ನಿರ್ಣಯ "ಸಾಂಸ್ಕೃತಿಕ ಕ್ರಾಂತಿಯ ತಪ್ಪು ಸಿದ್ಧಾಂತಗಳಿಗೆ 9ನೇ ಸಮ್ಮೇಳನ ಮಾನ್ಯತೆಕೊಟ್ಟಿತು. ಹತ್ತನೇ ಸಮ್ಮೇಳನ ಈ ಎಡ ತಪ್ಪುಗಳನ್ನು ಮುಂದುವರೆಸಿ ಕೇಂದ್ರಸಮಿತಿಯ ಪೊಲಿಟಿಕಲ್ ಬ್ಯೂರೋದೊಳಗೆ ಜಿಯಾಂಗ್ ಕ್ವಿಂಗ್‌ರ ಪ್ರತಿಕ್ರಾಂತೀ ಪ್ರಭಾವ ವೃದ್ಧಿಯಾಗಲು ಅನುವು ಮಾಡಿಕೊಟ್ಟಿತು" ಎಂದಿದೆ. ಮುಂದುವರಿದು "ಕಾಮ್ರೇಡ್ ಜೆಂಗ್ ಕ್ಸಿಯಾವೋ ಪಿಂಗ್‌ರು ತಪ್ಪುಗಳನ್ನು ಸರಿಪಡಿಸಲು ಸೂಚಿಸಿದ ವ್ಯವಸ್ಥಾಬದ್ಧ ಕ್ರಮಗಳನ್ನು ಮಾವೋ ಜೆಡೊಂಗ್ ಸ್ವೀಕರಿಸದೆ ಮತ್ತೊಮ್ಮೆ ದೇಶವನ್ನು ಅಲ್ಲೋಲಕಲ್ಲೋಲದೆಡೆಗೆ ತಳ್ಳಿದರು, 'ಸಾಂಸ್ಕೃತಿಕ ಕ್ರಾಂತಿ'ಯ ದೀರ್ಘಕಾಲೀನ ಹಾಗೂ ಆಳವಾದ ಪ್ರಭಾವ ಬೀರಿದ ಗಂಭೀರ 'ಎಡ' ತಪ್ಪುಗಳ ಪ್ರಮುಖ ಹೊಣೆ ಕಾಮ್ರೇಡ್ ಮಾವೋ ಜೆಡೊಂಗ್‌ರದ್ದು...ಪಕ್ಷ ಸಮಾಜವಾದೀ ರಚನೆಯ ಹೊಸ ಜವಾಬ್ದಾರಿಯನ್ನು ಹೊರಬೇಕಾಗಿದ್ದ ಸಮಯದಲ್ಲಿ ಅವರು ವಾಸ್ತವತೆ ಹಾಗೂ ಜನತೆಯಿಂದ ದೂರವಾಗಿ ವೈಯಕ್ತಿಕವಾಗಿ ವರ್ತಿಸಿ ಕೇಂದ್ರಸಮಿತಿಯನ್ನೂ ಕಡೆಗಣಿಸಿ ಸಮಸ್ಯೆಗಳ ವಿಶ್ಲೇಷಣೆ ನಡೆಸುವಲ್ಲಿ ಸರಿ-ತಪ್ಪುಗಳು, ಜನತೆ-ಶತ್ರು ಇವುಗಳ ಬಗ್ಗೆ ಗೊಂದಲಮಾಡಿಕೊಂಡರು" ಎಂದು ನಿರ್ಣಯ ಹೇಳುತ್ತದೆ. ಇದು ನಿಸ್ಸಂಶಯವಾಗಿಯೂ ಮಾವೋರ ಮಾರ್ಗದ ಕಟು ಟೀಕೆಯೇ ಸರಿ. ಮಾವೋರ ನಾಯಕತ್ವವನ್ನು ಹೀಗೆ ಎರಡು ಸ್ಪಷ್ಟ ಅವಧಿಗಳಾಗಿ ವಿಂಗಡಿಸಬಹುದು. 1935 ರಿಂದ 1958ರ ಅವಧಿಯಲ್ಲಿ ಮಾವೋ ಜೆಡೊಂಗ್‌ರಲ್ಲಿ ಮಾರ್ಕ್ಸ್‌ವಾದೀ-ಲೆನಿನ್‌ವಾದೀ ವಿಚಾರಧಾರೆ ಬಲಗೊಳ್ಳುತ್ತಿದ್ದರೆ ನಂತರದ ಅವಧಿ ಅಂದರೆ 1958ರಿಂದ 1976ರಲ್ಲಿ ಅವರ ಸಾವಿನವರೆಗಿನ ಅವಧಿ ಮಾರ್ಕ್ಸ್‌ವಾದಿಯಲ್ಲದ ಅತೀ ಎಡ ಪಂಥೀಯತೆಯ ಅವಧಿಯಾಗಿತ್ತು.

ಮಾರ್ಕ್ಸ್‌ವಾದ-ವಿರೋಧೀ ಹಾಗೂ ವಸ್ತುನಿಷ್ಠವಲ್ಲದ ವಿಶ್ಲೇಷಣೆ

ಜಾಗತಿಕ ಕಮ್ಯೂನಿಸ್ಟ್ ಚಳುವಳಿಯ ಚರಿತ್ರೆಯೂ ಸೇರಿದಂತೆ ಜಗತ್ತಿನ ಚರಿತ್ರೆಯಲ್ಲಿ ಮೊದಲು ಅತ್ಯುತ್ತಮ ಕ್ರಾಂತಿಕಾರೀ ನಾಯಕರೆನಿಸಿಕೊಂಡವರು ನಂತರ ಮುಗ್ಗರಿಸಿ ಮಾರ್ಕ್ಸ್‌ವಾದ-ಲೆನಿನ್‌ವಾದದ ವೈಜ್ಞಾನಿಕ ಚಿಂತನೆಯಿಂದ ದೂರವಾದ ಹಲವು ಉದಾಹರಣೆಗಳನ್ನು ಕಾಣಬಹುದು. ಆದ್ದರಿಂದ ಒಬ್ಬ ಮಾರ್ಕ್ಸ್‌ವಾದೀ ಇತಿಹಾಸಕಾರ ಯಾವುದೇ ನಾಯಕ ವಿವಿಧ ಅವಧಿಗಳಲ್ಲಿ ವಹಿಸಿದ ಪಾತ್ರವನ್ನು ವಿಶ್ಲೇಷಿಸುವಾಗ ಏಕ್‌ದಂ ವಸ್ತುನಿಷ್ಠನಾಗಿರಬೇಕು. ಈ ದೃಷ್ಟಿಯಿಂದ ಮಾವೋರು ಚೀನೀ ಕ್ರಾಂತಿಗೆ ನೀಡಿದ ಮಹಾನ್ ಕೊಡುಗೆಯನ್ನು ಏಕ್‌ದಂ ಕಡೆಗಣಿಸಿ ಅವರ ಗಂಭೀರ ತಪ್ಪುಗಳ ಪಟ್ಟಿಯನ್ನು ಮಾತ್ರ ಎತ್ತಿ ತೋರಿಸುವುದಾಗಲೀ ಅಥವಾ ಅವರ ಗಂಭೀರ ಲೋಪದೋಷಗಳನ್ನು ಮರೆಮಾಚಿ ಅವರನ್ನು ಆಜೀವನ ಕ್ರಾಂತಿಕಾರೀ ನಾಯಕನೆಂದು ಚಿತ್ರಿಸುವುದಾಗಲೀ ಮಾರ್ಕ್ಸ್‌ವಾದೀ ಮತ್ತು ವಸ್ತುನಿಷ್ಠ ವಿಶ್ಲೇಷಣೆಯಾಗಲಾರದು. ಎಲ್ಲಾ ದೇಶಗಳ ಎಲ್ಲಾ ಕಾಲಗಳ ಮಹಾನ್ ನಾಯಕರಂತೆ ಮಾವೋ ಹಾಗೂ ಚೀನೀ ಕ್ರಾಂತಿಯ ಇತರ ನಾಯಕರೂ ಅವರ ಕಾಲದ ಕ್ರಾಂತಿಕಾರೀ ಚಟುವಟಿಕೆಗಳ ಫಲವಾಗಿಯೇ ರೂಪಗೊಂಡವರು. ಅದೇ ರೀತಿ ಈ ನಾಯಕರೂ ಆ ಚಟುವಟಿಕೆಗಳಿಗೆ ತಮ್ಮ ಅಮೋಘ ಕೊಡುಗೆಗಳನ್ನೂ ಇತ್ತರು. ಆದ್ದರಿಂದ ಚೀನೀ ಕ್ರಾಂತಿಯಲ್ಲಿ ಮಾವೋರ ಪಾತ್ರವನ್ನು ಕಿರಿದುಗೊಳಿಸುವ ಪ್ರಯತ್ನ ಸತ್ಯ ಹಾಗೂ ವಾಸ್ತವತೆಗೆ ಅಪಚಾರವೆಸಗಿದಂತೆ. ಅದೇ ರೀತಿ ಅವರ ಗಂಭೀರ, ಅಪಾಯಕಾರೀ ಮಾರ್ಕ್ಸ್‌ವಾದ-ಲೆನಿನ್‌ವಾದ ವಿರೋಧೀ ತಪ್ಪುಗಳನ್ನು ಕಡೆಗಣಿಸುವುದೂ ವಸ್ತುನಿಷ್ಠವಲ್ಲದ ಹಾಗೂ ಅತೀ ಸರಳೀಕೃತ ಸಾಮಾನ್ಯೀಕರಣವಾಗುತ್ತದೆ.

o

ಕರ್ನಾಟಕ ರಾಜ್ಯದಲ್ಲಿ

ಕೂಲಿಗಾಗಿ ಕಾಳು - ನಮಗೆಲ್ಲಿ ಕೂಲಿ! ನಮಗೆಲ್ಲಿ ಕಾಳು!

-ಎನ್ಕೆ

ಕೂಲಿಗಾಗಿ ಕಾಳು ಯೋಜನೆಗೆ ತಮ್ಮ ರಾಜ್ಯಕ್ಕೆ ಕೇಂದ್ರದಿಂದ 12 ಕೋಟಿ ರೂ. ಬಾಕಿ ಬರಬೇಕಾಗಿದ್ದು ಈ ಪೈಕಿ 6 ಕೋಟಿ ರೂ. ಗಳನ್ನು ಕೊಡುವುದಾಗಿ ಕೇಂದ್ರ ಸರಕಾರ ಆಶ್ವಾಸನೆ ನೀಡಿದ್ದರೂ ಆ ಹಣವೂ ಬಂದಿಲ್ಲವೆಂದು ಪಶ್ಚಿಮ ಬಂಗಾಲ ಕಂದಾಯ ಸಚಿವ ವಿನಾಯಕ ಕೃಷ್ಣ ಚೌಧರಿಯವರು ತಾ. 5 ರಂದು ಬೆಂಗಳೂರಿನಲ್ಲಿ ಆರೋಪ ಹೊರಿಸಿದರು.

ಈ ಯೋಜನೆ ಪ್ರಕಾರ 24 ಕೋಟಿ ರೂ. ಖರ್ಚಾಗಿದ್ದು 12 ಕೋಟಿ ರೂ.ಯನ್ನು ಕೇಂದ್ರ ರಾಜ್ಯಕ್ಕೆ ನೀಡಬೇಕಾಗಿದೆ. ಈ ಯೋಜನೆಯನ್ವಯ ದಿನ ಒಂದಕ್ಕೆ ತಲಾ 4-50 ರೂ. ಕೂಲಿಯನ್ನೂ ಒಂದು ಕೆ. ಜಿ. ಧಾನ್ಯವನ್ನೂ ನೀಡಲಾಗುತ್ತಿದೆ.

ಈ ಯೋಜನೆ ನಡೆಯುತ್ತಿರುವುದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದಲ್ಲಿರುವ ಎಡರಂಗ ಸರಕಾರದಿಂದ. ಈ ಯೋಜನೆ ಗ್ರಾಮಾಂತರ ಪ್ರದೇಶದಲ್ಲಿ ಪ್ರಭಾವಿತವಾಗಿದೆ. ಬಡಜನರಿಗೆ ಅನ್ನ ಒದಗಿಸುವಲ್ಲಿ ಸಹಾಯಕವಾಗಿದೆ. ಜನರಿಗೆ ಉಪಯುಕ್ತವಾಗುವ, ಬೆಲೆ ಹೆಚ್ಚಿಸುವ ವ್ಯಾಪಾರಿಗಳಿಂದ ಸ್ವಲ್ಪ ಮಟ್ಟಿಗಾದರೂ ಮುಕ್ತವಾಗುವ ದೃಷ್ಟಿಯಲ್ಲಿ ಈ ಯೋಜನೆ ಅತ್ಯಗತ್ಯ. ಪ. ಬಂಗಾಲದ ಎಡರಂಗ ಸರಕಾರ ನಿಷ್ಠೆಯಿಂದ ಈ ಕಾರ್ಯಕ್ರಮ ನಡೆಸುತ್ತಿದೆ. ಕೇಂದ್ರದ ಇಂದಿರಾ ಸರಕಾರ ಇದರ ಅರ್ಧ ಖರ್ಚು ಕೂಡಾ ಕೊಡುತ್ತಿಲ್ಲ. ಕೇಂದ್ರ-ರಾಜ್ಯ ಸಂಬಂಧ ಎಷ್ಟು ಸಂಗಮವಾಗಿದೆ ನೋಡಿದಿರಾ. ಬಡವರ ತಾಯಿ ವಿರೋಧಿ ಪಕ್ಷದ ಸರಕಾರಕ್ಕೆ ಎಂಥ ತಾರತಮ್ಯ ಮಾಡುತ್ತಿದೆ. "ಮುಂಹ ಮೇ ಮೀಠೀ ಬಾತ ಬಗಲ ಮೇ ಚೂರಿ" ಎಂಬ ಗಾದೆಯನ್ನು ನೆನಪು ಮಾಡಿಕೊಳ್ಳಬಹುದಲ್ಲ.

ಆದರೆ ನಮ್ಮ ಗುಂಡೂರಾವ್ ರಾಜ್ಯದಲ್ಲಿ ಕೂಲಿಯೂ ಇಲ್ಲ ಕಾಳೂ ಇಲ್ಲವಲ್ಲ! ಏನು ಸಂಗತಿ ? "ನಾವೆಲ್ಲ ಇಂದಿರಾ ಹೆಸರಲ್ಲಿ ಆರಿಸ್ಸಿ ಬಂದವರು. ನಮಗೆ ಕಾಳೂ ಬೇಡ ಕೂಲಿಯೂ ಬೇಡ. ಅಮ್ಮನ ಆಶೀರ್ವಾದ ಒಂದೇ ಸಾಕು" ಎನ್ನುತ್ತಾರೆ ಗುಂಡೂರಾಯರು. ಕೆಲವು ವರ್ಷಗಳ ಹಿಂದೆ ಅಮ್ಮನ ತಲೆಯ ಮೇಲೆ ಕೈಯಿಟ್ಟ ಕೆಲವು ವಿದೇಶಿ ಕ್ರೈಸ್ತ ಸಂಸ್ಥೆಗಳು ತಮ್ಮದೇ ಆದ ಏಜನ್ಸಿಗಳ ಮೂಲಕ ಸಾಕಷ್ಟು ಗೋದಿ-ಅಕ್ಕಿ ಒದಗಿಸುತ್ತಿದ್ದರು. ಬಾವಿ ತೋಡುವ ಸಲುವಾಗಿ, ಹುಟ್ಟು ಗುಣ ಬೆಟ್ಟ ಹತ್ತಿದರೂ ಹೋಗುವುದಿಲ್ಲವೆಂಬ ಗಾದೆಯಂತೆ, ಕ್ರಿಶ್ಚನ್ ಮಿಶನರಿಗಳ ಸಹಾಯವಿರಲಿ ಬೇಕಾದ್ದಿರಲಿ, ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ತಿಂದುತೇಗುವಂಥ ಒಳ್ಳೆ ಗುಣಗಳ ನಮ್ಮ ಪುಢಾರಿಗಳು ಅವುಗಳ ಸದುಪಯೋಗ ಮಾಡಿಕೊಳ್ಳುವ ಗುಣ ಹೊಂದಿದವರಲ್ಲ. ಕಾರಣ ಕರ್ನಾಟಕ ರಾಜ್ಯದಲ್ಲಿ ಅದೂ ಬಂದಾಗಿದೆ; ಕೇಂದ್ರ ಸರಕಾರದ ಕೂಲಿಗೆ ಕಾಳು ಯೋಜನೆಯೂ ಕನ್ನಡ ಹಳ್ಳಿಗಳನ್ನು ತಲ್ಪಿಲ್ಲ. ಯಾಕೆ ? ದಿಲ್ಲಿಗೂ-ಬೆಂಗಳೂರಿಗೂ ಬಹುದೂರ. ಆದರೆ ಇಂದಿರಾಗೆ ಗುಂಡೂರಾಯರು ಬಹು ಸಮೀಪ.

ಆದ್ದರಿಂದ ಪ.ಬಂಗಾಲದ ಜ್ಯೋತಿ ಬಸು ಸರಕಾರ 20.52 ಲಕ್ಷ ಮಾನವ ದಿನಗಳ ಕೆಲಸವನ್ನು ಕೂಲಿಗಾಗಿ ಕಾಳು ಯೋಜನೆಗಾಗಿ ವಿನಿಯೋಗಿಸಿದಾಗ, ನಮ್ಮಮ್ಮನ ನಾಟಕ ಕಂಪೆನಿ ಮ್ಯಾನೇಜರ ಸರಕಾರ 20 ದಿವಸದ ಕೆಲಸವನ್ನೂ ಕೂಲಿಗಾಗಿ ಕಾಳು ಯೋಜನೆಗಾಗಿ ವಿನಿಯೋಗಿಸಿಲ್ಲವಲ್ಲ. ಜನರು ಪ್ರಶ್ನೆ ಕೇಳುತ್ತಾರೆ. ರಾಯರ ಸರಕಾರದ ಉತ್ತರ ಕಾಯುತ್ತಾರೆ. ಸರಿಯಲ್ಲವೇ ?

ಬಿನ್ನಿಮಿಲ್-ಕೈಗಾರಿಕಾ ನೀತಿಯ ವಿಫಲತೆ

ನಮ್ಮ ದೇಶದಲ್ಲಿಯ "ಅನಾರೋಗ್ಯ" ಕೈಗಾರಿಕೆಗಳಲ್ಲಿ 1500 ಕೋಟಿ ರೂ. ಮೇಲ್ಪಟ್ಟು ಬ್ಯಾಂಕಿನ ಬಂಡವಾಳ ಸಿಕ್ಕಿಕೊಂಡಿದೆಂದು ಕೇಂದ್ರದ ಉಪ ಆರ್ಥಿಕಮಂತ್ರಿ ಮಗನಭಾಯಿ ಬಾರೋಟರು ಹೋದ ತಿಂಗಳು ಬೆಂಗಳೂರಿನಲ್ಲಿ ಕೆನರಾ ಬ್ಯಾಂಕಿನ 75ನೇ ಹುಟ್ಟುಹಬ್ಬದ ಆಚರಣೆಯ ಸಂದರ್ಭದಲ್ಲಿ ಕಣ್ಣೀರು ಹರಿಸಿದರು. ಇದರ ಪೈಕಿ ರೂ. 1100 ಕೋಟಿ ಚಿಕ್ಕ ಉದ್ದಿಮೆ ಘಟಕಗಳಲ್ಲೂ, ಉಳಿದ ಹಣ 354 ದೊಡ್ಡ ಕೈಗಾರಿಕೆಗಳಲ್ಲಿ ಮುಳುಗಿದೆಂದೂ ಹೇಳುತ್ತ, "ಕೈಗಾರಿಕೆಗಳ ಅನಾರೋಗ್ಯಕ್ಕೆ ಯಾರು ಹೊಣೆ?" ಎಂಬ ನೇರ ಪ್ರಶ್ನೆಯನ್ನು ತಾವೇ ಕೇಳಿ, "ಶೇ 54ರಷ್ಟು ಪ್ರಕರಣಗಳಲ್ಲಿ ಆಡಳಿತವರ್ಗದ ವೈಫಲ್ಯವೇ ಕಾರಣ" ಎಂಬ ನೇರ ಉತ್ತರವನ್ನಿತ್ತರು. ಇಷ್ಟರಿಂದಲೇ ಸಮಾಧಾನಗೊಳ್ಳದೆ "ಕೈಗಾರಿಕೆಗಳಿಗೆ ನೆರವು ನೀಡಲು ಕೇಂದ್ರ ಸರಕಾರ ಬದ್ಧವಾಗಿದೆಂದೂ, ಕೈಗಾರಿಕೆಗಳಲ್ಲಿರುವ ಅನಾರೋಗ್ಯವನ್ನು ನಿವಾರಿಸುವುದು ಹೇಗೆಂಬುದೇ ನಮ್ಮ ಆಸಕ್ತಿಯಾಗಿದೆ"ಂದೂ ಬಂಡವಾಳಶಾಹಿ ಪಕ್ಷದ ಬ್ಯಾತೆರೆದರು.

1500ಕೋಟಿ ರೂ. ಅನಾರೋಗ್ಯ ಕೈಗಾರಿಕೆಗಳಲ್ಲಿ ಸಿಗಿಸಿಕೊಂಡಿದ್ದರೂ ಈ ಸಮಸ್ಯೆಯ ಪರಿಹಾರಕ್ಕೆ ಉಪಾಯ ಕಂಡುಹಿಡಿಯಲು ಅಸಮರ್ಥವಾದ ಮಗನ ಭಾಯಿ ಬರೋಟರ ಹೇಳಿಕೆಯಿಂದ ಉತ್ಸುಕರಾದ ಬೆಂಗಳೂರಿನ ಬಿನ್ನಿಮಿಲ್ ಮಾಲಕರು ನವೆಂಬರ್ 25ರಿಂದ ಕಾರ್ಖಾನೆ ಮುಚ್ಚಲಾಗುವುದೆಂಬ ನೋಟೀಸು ಪ್ರಕಟಿಸಿದ್ದಾರೆ. 7000 ಕೆಲಸಗಾರರನ್ನು ಬೀದಿಪಾಲು ಮಾಡಲು ಹೊರಟಿದ್ದಾರೆ.

ವರ್ಷದ ಪ್ರಾರಂಭದಲ್ಲಿ ಮದ್ರಾಸಿನ ಬಿನ್ನಿಮಿಲ್ 6 ತಿಂಗಳು ಮುಚ್ಚಿ 20,000 ಕಾರ್ಮಿಕರ ಕಣ್ಣೀರಿನ ಹೊಳೆಹರಿಸಿತು. ಕೊನೆಗೆ 2000 ಕೆಲಸಗಾರರನ್ನು ಬೀದಿಗಟ್ಟಿ, ವಾರದಲ್ಲಿ 7 ದಿವಸದ ಕೆಲಸ, ಹೆಚ್ಚಿನ ಕೆಲಸದ ಭಾರ, ಕಡಿಮೆ ಸಂಬಳದ ಕರಾರುಗಳೊಂದಿಗೆ ಮುಚ್ಚಿದ ಬಾಗಿಲನ್ನು ತೆರೆದು ಮಾಂಸವಿಲ್ಲದ ಕಳೆಗುಂದಿದ ಚರ್ಮದ ಹೊದಿಕೆಯ ಮೂಳೆಗಳನ್ನು ಒಳಗೆ ಸೇರಿಸಿತು. ವಿಚಾರಹೀನ ಹೆಣಗಳಂತೆ ಕಾರ್ಮಿಕರು ಕೆಲಸಕ್ಕೆ ಹಿಂದಿರುಗಿದರು.

ಕಳೆದ 7 ವರ್ಷಗಳಲ್ಲಿ 7.31 ಕೋಟಿ ರೂ. ಹಾನಿಯಾಗಿದೆಂದು ಮಾಲಕ ವರ್ಗದ ವಾದ. ಹೆಚ್ಚಿನ ಪಗಾರ, ಕಡಿಮೆ ಉತ್ಪನ್ನ, ಹೆಚ್ಚಾಗಿರುವ ಕಾರ್ಮಿಕ ಸಂಖ್ಯೆ, ಮಿತಿಮೀರಿದ ಕಾರ್ಮಿಕರ ಗೈರುಹಾಜರಿ-ಹಾನಿಯಾಗಲಿಕ್ಕೆ ಮಾಲಕರು ತೋರಿಸುವ ಕಾರಣ.

ಬಿನ್ನಿಮಿಲ್ಲಿನಂತೆಯೇ ಹಾನಿಯಾಗಿದೆಂದು ಅಳುತ್ತಿದ್ದ ಮಿಲ್ಲುಗಳನ್ನು ರಾಷ್ಟ್ರೀಯ ಟೆಕ್ಸ್‌ಟೈಲ್ ಕಾರ್ಪೊರೇಷನ್ ವಹಿಸಿಕೊಂಡ ನಂತರ, ಹಾನಿಯನ್ನು ನಿಲ್ಲಿಸಿ, ಲಾಭಗಳಿಸುತ್ತಿವೆ. ಬೆಂಗಳೂರಿನ ಮಿನರ್ವ, ಮಹಾರಾಜ ಹಾಗೂ ಬಳ್ಳಾರಿಯ ನೂಲಿನ ಗಿರಣಿಗಳು ತಮ್ಮ ಕಾರ್ಮಿಕರಿಗೆ ಬಿನ್ನಿಮಿಲ್ ಕೊಡುತ್ತಿರುವ ಸಂಬಳಕ್ಕಿಂತಲೂ ಹೆಚ್ಚಿಗೆ ಕೊಡುತ್ತಿದ್ದಾರೆ. ಅದರಂತೆಯೇ ಬಿನ್ನಿಮಿಲ್ಲಿನ ಮದ್ರಾಸ್ ಘಟಕದ ಕಾರ್ಮಿಕನಿಗೆ, ಬೆಂಗಳೂರು ಘಟಕದ ಕಾರ್ಮಿಕನಿಗಿಂತ ಸುಮಾರು ರೂ. 125 ಹೆಚ್ಚು ಸಂಬಳ ಅದೇ ತರದ ಕೆಲಸಕ್ಕೆ ಸಿಗುತ್ತಿದೆ.

ಕಾರ್ಮಿಕರ ಗೈರುಹಾಜರಿ, ಬದ್ಲಿ ಕಾರ್ಮಿಕರ ನೇಮಕ, ಉತ್ಪಾದನೆಯ ಮಟ್ಟ-ಈ ಪ್ರಶ್ನೆಗಳೆಲ್ಲಾ ದೇಶದಾದ್ಯಂತ ಪಸರಿಸಿರುವ ಎಲ್ಲ ನೂಲು-ಬಟ್ಟೆಗಿರಣಿಗಳೆಲ್ಲ ಎದುರಿಸುತ್ತಿರುವ ಸರ್ವಸಾಮಾನ್ಯ ಪ್ರಶ್ನೆ. ಮಶಿನರಿಗಳ ಪರಿಸ್ಥಿತಿ, ಹವಾಮಾನ, ನಾನಾ ತರದ ಹತ್ತಿಗಳನ್ನು ಸೇರಿಸುವ ಪದ್ಧತಿ, ಕಾರ್ಮಿಕರಿಗೆ ಒದಗಿಸುವ ಇತರ ಸೌಲಭ್ಯಗಳೆಲ್ಲಾ, ಕೆಲಸಗಾರರ ಕೆಲಸ, ಅವರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಟೆಕ್ಸ್‌ಟೈಲ್ ಕಾರ್ಮಿಕರಲ್ಲಿ ಬಹಳಷ್ಟು ಜನ ಕ್ಷಯ, ಹೃದಯ ರೋಗಗಳಿಗೆ ಬಲಿಯಾಗುತ್ತಿದ್ದಾರೆ. ಹತ್ತಿ ಹೃದಯ ಸೇರಿ ಆರೋಗ್ಯ ಕೆಡಿಸುತ್ತದೆ. ಮಿಲ್ಲುಗಳ ಮೇಲಧಿಕಾರಿಗಳಿಗೆ, ಮಾಲಕವರ್ಗಕ್ಕೆ ಸಿಗುವ ಸವಲತ್ತುಗಳು ಕಾರ್ಮಿಕರಿಗಿಲ್ಲ. ಹತ್ತಿ ಸೇವನೆಯಿಂದ ಸಾಯುವುದೊಂದೇ ಅವರಿಗಿರುವ ದಾರಿ.

ಕರ್ನಾಟಕದಲ್ಲಿಯೇ ಬೆಂಗಳೂರು, ಹುಬ್ಬಳ್ಳಿ, ಗುಲ್ಬರ್ಗಾ, ಬಳ್ಳಾರಿಗಳಲ್ಲಿ ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್ನಿನಿಂದ ನಡೆಸಲ್ಪಡುವ ನೂಲು-ಬಟ್ಟೆಯ ಗಿರಣಿಗಳು ಲಾಭಗಳಿಸುತ್ತಿರುವಾಗ, ಹಳೇ ಮಶಿನರಿಗಳನ್ನು ಹೊಂದಿದ ನರಗುಂದ, ದಾವಣಗೆರೆ ಗಿರಣಿಗಳಲ್ಲಿ "ಬಾಗಿಲು ಮುಚ್ಚುವ" ನೀತಿಯನ್ನು ಅನುಸರಿಸದಿರುವಾಗ, ಬಿನ್ನಿಮಿಲ್ ಮಾಲಕರ ನೆಪ ಸಮರ್ಥನೀಯವಲ್ಲ. ಮಗನ ಭಾಯಿ ಬಾರೋಟರು ಹೇಳಿದಂತೆ ಆಡಳಿತವರ್ಗದ ವೈಫಲ್ಯವೇ ಇದಕ್ಕೆ ಕಾರಣ. ಕಾರ್ಮಿಕ ವಿರೋಧಿ ಸರಕಾರ, ಸರಕಾರದ-ಮಾಲಕರ ಬೆಂಬಲ ಪಡೆದ ಕಾರ್ಮಿಕ ಮುಖಂಡರ ನೀತಿಯೂ, ಸರಕಾರದ ಮಾಲಕ ಪರ ಧೋರಣೆ ಬಿನ್ನಿಮಿಲ್ ಮಾಲಕರಿಗೆ ಸಹಾಯಕಾರಿಯಾಗಿದೆ.

ರಾಷ್ಟ್ರದ ಅಭಿವೃದ್ಧಿಗಾಗಿ, ಬಡವರ ಏಳ್ಗೆಗಾಗಿ ವಿನಿಯೋಗಿಸಬೇಕಾದ 1500ಕೋಟಿ ರೂ. ಯನ್ನು ಬಿನ್ನಿಮಿಲ್ ಮಾಲಕರಂಥವರು ನುಂಗಿಹಾಕುತ್ತಿರುವುದನ್ನು ತಡೆಗಟ್ಟುವ ಶಕ್ತಿ ಬಂಡವಾಳಶಾಹಿ ಪರ ಇಂದಿರಾ ಸರಕಾರದಿಂದ ಸಾಧ್ಯವಾಗುತ್ತಿಲ್ಲ.

ಬಿನ್ನಿಯ ಕಾಕಿ ಮತ್ತಿತರ ಬಟ್ಟೆಗಳು ದೇಶದಲ್ಲೇ ಪ್ರಸಿದ್ಧವಾಗಿರುವಾಗ, ಹಾನಿಯ ನೆಪದಲ್ಲಿ ಗಿರಣಿ ಮುಚ್ಚುವ ಧೋರಣೆ ದೇಶಕ್ಕೂ, ಕಾರ್ಮಿಕರಿಗೂ ಮೋಸಮಾಡುವುದಾಗಿದೆ.

ಕಾಂಗ್ರೆಸ್ ಪರ ಕಾರ್ಮಿಕ ಸಂಘಟನೆ ಮತ್ತು ಸರ್ಕಾರ ಮಾಲಕರಿಗೆ ಬೆಂಬಲ ಕೊಡುತ್ತದೆ. 24 ಗಂಟೆ ಕೆಲಸ, ವಾರದಲ್ಲಿ 7 ದಿನ ದುಡಿತ, ಕಾರ್ಮಿಕರಲ್ಲಿ ಕಡಿತ, ದುಡಿತದಲ್ಲಿ ಹೆಚ್ಚಳದಂತ ಕರಾರುಗಳನ್ನು ಹೇರಲೂ ಸರ್ಕಾರ ನಾಚುವುದಿಲ್ಲ. ಮಾಲಕರ, ಸರಕಾರದ, ಕಾಂಗ್ರೆಸ್ ಕಾರ್ಮಿಕ ಮುಖಂಡರ ಒಳಸಂಚನ್ನು ದುರಿಸಿ, 7000 ಬಿನ್ನಿಮಿಲ್ ಕಾರ್ಮಿಕರ ಅಳಿವು-ಉಳಿವಿನ ಹೋರಾಟಕ್ಕೆ ಬೆಂಬಲ ಕೊಟ್ಟು 7000 ಕೆಲಸಗಾರರು, 35,000 ಅವರ ಅವಲಂಬಿತರು ಬದುಕಿ-ಬಾಳುವಂತೆ ಮಾಡುವ ಕರ್ತವ್ಯ ಕಾರ್ಮಿಕವರ್ಗದ್ದಾಗಿದೆ. ಮೈಕೋ, ಐ.ಟಿ.ಸಿ. ಸಾರ್ವಜನಿಕ ರಂಗದ ಕೈಗಾರಿಕೆಗಳ ಕೆಲಸಗಾರರ ಹೋರಾಟಕ್ಕೆ ಬೆಂಬಲವಿತ್ತಂತೆಯೇ, ಬಿನ್ನಿಮಿಲ್ ಕಾರ್ಮಿಕರ ಹೋರಾಟಕ್ಕೂ ಬೆಂಬಲ ಕೊಟ್ಟು ಅವರು ಗೆಲ್ಲುವಂತೆ ಮಾಡುವುದು ಕ್ರಾಂತಿಕಾರಿ ಕಾರ್ಮಿಕ ವರ್ಗದ ಕರ್ತವ್ಯ. ಆ ಕರ್ತವ್ಯ ಪೂರೈಸಲಿಕ್ಕೆ ಮುಂದಾಗೋಣ. ಹಾಗೆಯೇ ಮಾಲಕರ ಪರ ಸರ್ಕಾರವನ್ನು ಬದಲಿಸಲೂ ಹೋರಾಡೋಣ.

ನೀರಾವರಿ-ಸೋತ ಕೈ

ಭಾರತದಂತ ಮುಂದುವರಿಯದ ದೇಶಕ್ಕೆ ಒಕ್ಕಲತನ ಪ್ರಾಧಾನ್ಯ. ಕೈಗಾರಿಕೋದ್ಯಮ ಬೆಳೆಯಲು ಒಕ್ಕಲತನದ ಹುಟ್ಟುವಳಿ ಹೆಚ್ಚಾಗಬೇಕು. ದೇಶ ಎದುರಿಸುತ್ತಿರುವ ಬಹಳಷ್ಟು ಸಮಸ್ಯೆಗಳ ಪರಿಹಾರಕ್ಕೆ ಅದು ಅತ್ಯಗತ್ಯ. ಒಕ್ಕಲತನ ಸರಿಯಾಗಬೇಕಾದರೆ ನೀರು ಅತ್ಯಗತ್ಯ. ಭಾರತ ದೇಶದಲ್ಲಿ ನೀರಿನ ತೊಂದರೆಯಿಲ್ಲ. ಹಲವಾರು ನದಿಗಳಲ್ಲಿಯ ನೀರು ಸರಿಯಾಗಿ ಉಪಯೋಗವಾಗದೆ ಸಮುದ್ರ ಸೇರುತ್ತಿದೆ. ನದಿಗಳ ನೀರನ್ನು ತಡೆಹಿಡಿದು, ನೀರಾವರಿ ಮತ್ತು ವಿದ್ಯುಚ್ಛಕ್ತಿ ಉತ್ಪಾದನೆಗೆ ಉಪಯೋಗ ಮಾಡಬೇಕಾದ್ದು ದೇಶ ಅಭಿವೃದ್ಧಿಯಾಗಬೇಕೆಂದು ಆಶಿಸುವ ಸರಕಾರದ ಕರ್ತವ್ಯ.

ಸ್ವಾತಂತ್ರ್ಯಪಡೆದು 34 ವರ್ಷವಾಗುತ್ತ ಬಂತು. ತನ್ನ 32 ವರ್ಷಗಳ ಆಳ್ವಿಕೆಯಲ್ಲಿ ಕಾಂಗ್ರೆಸ್ ಸರಕಾರ ಈ ದಿಸೆಯಲ್ಲಿ ಸಾಧಿಸಿದ್ದೇನು ? ಇತ್ತೀಚೆಗೆ ದಿಲ್ಲಿಯಲ್ಲಿ ಸೇರಿದ ನೀರಾವರಿ ಮಂತ್ರಿಗಳ ಸಭೆಯಲ್ಲಿ ತಿಳಿದುಬಂದ ಸಂಗತಿ ಆಳುವವರ, ಆಳುವವರನ್ನು ಚುನಾವಣೆಯಲ್ಲಿ ಆರಿಸಿ ಕಳುಹಿಸುವ ಜನರ ತಲೆಕೆಳಗಾಗುವಂತೆ ಮಾಡಿದೆ. ನಮ್ಮ ದೇಶದಲ್ಲಿ ತುಂಬಿ ಹರಿಯುತ್ತಿರುವ ನದಿ-ಹಳ್ಳಗಳ ಶೇ. 15ರಷ್ಟು ನೀರನ್ನು ಬಳಸಿಕೊಳ್ಳುವ ಶಕ್ತಿ ನಮ್ಮಲ್ಲಿಲ್ಲವಂತೆ.

(6ನೇ ಪುಟ ನೋಡಿ)

ಜಿ. ಆರ್. ಇಂಜಿನಿಯರಿಂಗ್ ಕಾರ್ಮಿಕರ ವೀರೋಚಿತ ಹೋರಾಟ ಸಫಲ

83 ದಿನಗಳಿಂದ ಹೋರಾಟದಲ್ಲಿದ್ದ ಬೆಂಗಳೂರಿನ ಜಿ. ಆರ್. ಇಂಜಿನಿಯರಿಂಗ್‌ನ ಕಾರ್ಮಿಕರು ವಿಜಯಿಗಳಾಗಿದ್ದಾರೆ. 28-7-81 ರಿಂದ ಅಕ್ರಮವಾಗಿ 12 ಜನ ಕಾರ್ಮಿಕರನ್ನು ವಜಾಮಾಡಿದ್ದರ ವಿರುದ್ಧ ಕಾರ್ಮಿಕರು ಮುಷ್ಕರ ಹೂಡಿದ್ದರು. ಇದರ ಜೊತೆಗೆ ಶೇ. 20ರಷ್ಟು ಬೋನಸ್ಸು ನೀಡಬೇಕೆಂದೂ, ಕ್ಯಾಂಟೀನ್ ವ್ಯವಸ್ಥೆ ಸರಿಪಡಿಸಬೇಕೆಂದೂ ಕೂಡ ಕೇಳಿಕೊಂಡಿದ್ದರು.

ವಜಾ ಆದ 12 ಜನ ಕಾರ್ಮಿಕರಲ್ಲಿ ಒಬ್ಬರನ್ನೂ ವಾಪಸ್ಸು ತೆಗೆದುಕೊಳ್ಳಲಾಗುವುದಿಲ್ಲವೆಂದು ಆಡಳಿತ ವರ್ಗ ಹಟ ಹಿಡಿದಿತ್ತು. ಈ ಕುರಿತು ನಡೆದ ಮಾತುಕತೆ ಫಲಕಾರಿಯಾಗಿರಲಿಲ್ಲ. ಕಾರ್ಮಿಕರು ಅನಿವಾರ್ಯವಾಗಿ ಹೋರಾಟಕ್ಕಿಳಿದಿದ್ದರು. ಪೋಲೀಸರು ಆಡಳಿತವರ್ಗದ ನೆರವಿಗೆ ಧಾವಿಸಿ ಕಾರ್ಮಿಕರ ಮೇಲೆ ಸುಳ್ಳು ಮೊಕದ್ದಮೆ ದಾಖಲು ಮಾಡಿದ್ದರು. 60 ಜನ ಕಾರ್ಮಿಕರನ್ನು ಬಂಧಿಸಿ ಜೈಲಿಗೆ ಕಳಿಸಿದ್ದರು. ಬೆಂಗಳೂರಿನ ಕೃಷ್ಣರಾಜಪುರ ವಿಭಾಗದ ಸಮಸ್ತ ಕಾರ್ಮಿಕರು ಜಿ ಆರ್. ಇಂಜಿನಿಯರಿಂಗ್ ಕಾರ್ಮಿಕರನ್ನು ಬೆಂಬಲಿಸಿ 19-10-81ರಂದು ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದ್ದರು.

ಕಾರ್ಮಿಕರ ಸಂಘಟಿತ ಶಕ್ತಿಗೆ ಮಣಿದ ಮಾಲೀಕರು 15-10-81 ರಂದು ಕಾರ್ಮಿಕ ಮುಖಂಡರನ್ನು ಕರೆದು ಮಾತುಕತೆ ಪ್ರಾರಂಭಿಸಿದರು. ಎರಡು ದಿನಗಳ ದೀರ್ಘ ಮಾತುಕತೆ ನಂತರ 17-10-81ರಂದು ಒಪ್ಪಂದಕ್ಕೆ ಬರಲಾಯಿತು. ಮುಷ್ಕರವನ್ನು ಹಿಂತೆಗೆದುಕೊಳ್ಳಲಾಯಿತು.

ಒಪ್ಪಂದದ ಮುಖ್ಯಾಂಶಗಳು

1. ವಜಾ ಮಾಡಲ್ಪಟ್ಟ 12 ಜನ ಕಾರ್ಮಿಕರಲ್ಲಿ 8 ಜನ ಕಾರ್ಮಿಕರನ್ನು ಅವರ ಸರ್ವೀಸ್ ಮುಂತಾದ ಸೌಲಭ್ಯಗಳನ್ನು ಮುಂದುವರೆಸಿ ಕೆಲಸಕ್ಕೆ ವಾಪಸ್ ಪಡೆಯಲು ಮಾಲೀಕರು ಒಪ್ಪಿದ್ದಾರೆ.

2. ಉಳಿದ 4 ಜನರ ವಜಾವನ್ನು ಕೂಡಲೇ ರದ್ದು ಮಾಡಿ ಅವರ ವಜಾವನ್ನು 17-10-81ರಿಂದ ಅಮಾನತ್ತು(ಸಸ್ಪೆನ್‌ಷನ್)ಗೆ ಬದಲಿಸಿ ತನಿಖೆ ನಡೆಸುವುದು. ಹಾಗೂ ತನಿಖೆ ಕಾಲಕ್ಕೆ ಕಾನೂನು ಪ್ರಕಾರ ಸಂಬಳ ಕೊಡುವುದು.

3. ಶೇ. 18ರಷ್ಟು ಬೋನಸ್ಸನ್ನು ಎಲ್ಲ ಕಾರ್ಮಿಕರಿಗೆ ದೀಪಾವಳಿಯ ಒಳಗಾಗಿ ಕೊಡುವುದು.

4. ಮುಷ್ಕರದ ಅವಧಿಗೆ ಶೇ. 35ರಷ್ಟು ಸಂಬಳವನ್ನು ಎಲ್ಲ ಕಾರ್ಮಿಕರಿಗೆ ನೀಡುವುದು.

5. ಕ್ಯಾಂಟೀನ್ ವ್ಯವಸ್ಥೆಯನ್ನು ಉತ್ತಮಗೊಳಿಸುವುದು.

ಈ ಮೇಲ್ಕಂಡ ಒಪ್ಪಂದಕ್ಕೆ ಬರುವಲ್ಲಿ ಎಷ್ಟೇ ಕಷ್ಟಬಂದರೂ ಜಗ್ಗದೇ ಹೋರಾಡಿದ ಮತ್ತು ಈ ವೀರ ಹೋರಾಟಕ್ಕೆ ಎಲ್ಲ ರೀತಿಯಲ್ಲಿ ಸಹಕರಿಸಿದ ಜನತೆಗೆ ಹಾಗೂ ಕಾರ್ಮಿಕ ವಿಭಾಗಕ್ಕೆ ಸಿ.ಐ.ಟಿ.ಯು. ಪರವಾಗಿ ಕಾಂ. ಅನಂತರಾಂ ಕೃತಜ್ಞತೆ ಸಲ್ಲಿಸಿದ್ದಾರೆ.

ಕಾರ್ಮಿಕರ ಐಕ್ಯ ಹೋರಾಟಕ್ಕೆ ಜಯ ಖಂಡಿತ ಎನ್ನುವ ಸತ್ಯವನ್ನು ಜಿ. ಆರ್. ಇಂಜಿನಿಯರಿಂಗ್ ಕಾರ್ಮಿಕರ ಹೋರಾಟ ತೋರಿಸಿಕೊಟ್ಟಿದೆ.

○

ಆರ್ಥಿಕ ಸಮೀಕ್ಷೆ :

(3ನೇ ಪುಟದಿಂದ)

ಯನ್ನು ಪುನಃ ಜಾರಿಗೊಳಿಸಲು ಹವಣಿಸುತ್ತಿದೆ. ಜೀವವಿಮಾ ಮತ್ತು ಸಾಮಾನ್ಯ ವಿಮಾನೌಕರರ ಬೋನಸ್ ಮತ್ತು ತುಟ್ಟಿಭತ್ತೆಯನ್ನು ಸ್ಥಗಿತಗೊಳಿಸಲು ಸರ್ವಪ್ರಯತ್ನ ಮಾಡುತ್ತಿದೆ. ಹೈಕೋರ್ಟ್, ಸುಪ್ರೀಂ ಕೋರ್ಟ್‌ಗಳ ತೀರ್ಪುಗಳನ್ನೂ ಕಡೆಗಣಿಸುತ್ತಿದೆ.

ಆದರೆ, ಮೇಲಿನ ಸಮೀಕ್ಷೆಯಲ್ಲಿ ನೋಡಿದಂತೆ, ಇಂದಿರಾಗಾಂಧಿಯ ಘನ ಸರಕಾರವು ಸಮಾಜದ ಅತ್ಯಂತ ಶೋಷಿತ ಕೃಷಿಕಾರ್ಮಿಕರಿಗೂ ಜೀವನ ವೆಚ್ಚಕ್ಕನುಗುಣವಾಗಿ, ಬೆಲೆಏರಿಕೆಗನುಗುಣವಾಗಿ, ಬಡತನ ರೇಖೆಗಿಂತ ಮೇಲ್ಮಟ್ಟದ ಕನಿಷ್ಠ ವೇತನವನ್ನೂ ತನ್ನ ರಾಜ್ಯಸರಕಾರಗಳ ಮೂಲಕ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು ಸೋತಿದೆ. ಬಂಡವಾಳಶಾಹಿ ಸಮಾಜದಲ್ಲಿ ಕೂಲಿ ನಿರ್ಧಾರವಾಗುವುದು ಅಂತಿಮವಾಗಿ ಕೂಲಿಕಾರರ ಸಂಘಟನಾ ಶಕ್ತಿಗನುಸಾರವಾಗಿಯೇ ಹೊರತು ಬಂಡವಾಳಗಾರರ, ಭೂಮಾಲಕರ ಮತ್ತವರನ್ನು ಪ್ರತಿನಿಧಿಸುವ ಸರಕಾರದ ಕೃಪಾಕಟಾಕ್ಷದಿಂದಲ್ಲ. ಸರಕಾರ ಕನಿಷ್ಠ ಕೂಲಿ ನಿರ್ಧರಿಸುವಂತೆ ಒತ್ತಾಯಿಸಲಿಕ್ಕೂ ಕೃಷಿಕಾರ್ಮಿಕರ ಬಲವಾದ ಸಂಘಟನೆ ಅಗತ್ಯ. ನಿಶ್ಚಿತ ಕನಿಷ್ಠ ಕೂಲಿಯನ್ನು ನಿಜವಾಗಿ ಜಾರಿಗೊಳಿಸುವಂತೆಮಾಡಲೂ ಸಂಘಟಿತ ಹೋರಾಟ ಅಗತ್ಯ.

○

ಡಿ. ವೈ. ಎಫ್. ಐ.ನ ಕೋಲಾರ ಜಿಲ್ಲಾ ಸಮ್ಮೇಳನ

ಡಿ. ವೈ. ಎಫ್. ಐ.ನ ರಾಜ್ಯ ಸಮ್ಮೇಳನದ ಪೂರ್ವಭಾವಿಯಾಗಿ ಕೋಲಾರ ಜಿಲ್ಲಾ ಯುವಜನ ಸಂಘಟನೆಯ ಪ್ರಥಮ ಸಮ್ಮೇಳನವು ಬಂಗಾರಪೇಟೆಯಲ್ಲಿ 11-10-81 ರಂದು ನಡೆಯಿತು.

ಡಿ. ವೈ. ಎಫ್. ಐ.ನರಾಜ್ಯಸಂಚಾಲಕ ಕಾಂ. ಜಿ. ವಿ. ಶ್ರೀರಾಮ್‌ರೆಡ್ಡಿಯವರು ಸಮ್ಮೇಳನವನ್ನು ಉದ್ಘಾಟಿಸಿದರು.

ಕೆ. ಜಿ. ಎಫ್.ನ ಕಾರ್ಮಿಕ ನಾಯಕ ಕಾಂ. ಟಿ. ಎಸ್. ಮಣಿಯವರು ಆಗಮಿಸಿ ಸಮ್ಮೇಳನಕ್ಕೆ ಶುಭಕೋರಿದರು.

ಬಂಗಾರಪೇಟೆ, ಚಿಂತಾಮಣಿ, ಶಿಡ್ಲಘಟ್ಟ, ಬಾಗೇಪಲ್ಲಿ, ಕೆ.ಜಿ.ಎಫ್. ಘಟಕಗಳಿಂದ ಪ್ರತಿನಿಧಿಗಳು ಆಗಮಿಸಿದ್ದು ತಮ್ಮ ಘಟಕದ ಚಟುವಟಿಕೆಗಳ ವರದಿ ನೀಡಿದರು. ಬಾಗೇಪಲ್ಲಿಯ ಕಾಂ. ಜಯರಾಮರೆಡ್ಡಿಯವರು ಕೆಲವು ನಿರ್ಣಯಗಳನ್ನು ಮಂಡಿಸಿದರು. ಸಮ್ಮೇಳನ ನಿರ್ಣಯಗಳನ್ನು ಅಂಗೀಕರಿಸಿತು.

ಕೊನೆಯಲ್ಲಿ ಕೋಲಾರ ಜಿಲ್ಲಾ ಸಮಿತಿಗೆ ನೂತನ ಪದಾಧಿಕಾರಿಗಳನ್ನು ಚುನಾಯಿಸಲಾಯಿತು. ಅಧ್ಯಕ್ಷರಾಗಿ ಕಾಂ. ಪಿ. ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿಯಾಗಿ ಕೆ. ವಿ. ಸತ್ಯನಾರಾಯಣಸ್ವಾಮಿ, ಉಪಾಧ್ಯಕ್ಷರುಗಳಾಗಿ ಡಿ. ಎನ್. ಜಯರಾಮರೆಡ್ಡಿ ಮತ್ತು ಪಟ್ಟಾಭಿರಾಮನ್, ಸಹ ಕಾರ್ಯದರ್ಶಿಗಳಾಗಿ ಎಚ್. ಪಿ. ಅನಿಲ್‌ಕುಮಾರ್ ಮತ್ತು ಅನುರಾಧ ಮೂರ್ತಿ, ಖಜಾಂಚಿಯಾಗಿ ಕೆ.ಆರ್. ಶ್ರೀನಿವಾಸಗೌಡ ಇವರುಗಳು, ಕಾಂ. ಕುಪ್ಪುಸ್ವಾಮಿ, ಪರಮಶಿವಮೂರ್ತಿ, ಸುಬ್ರಮಣಿ, ರಿಯಾಜ್ ಪಾಷ, ಜಿ. ವಿ. ಶ್ರೀರಾಂರೆಡ್ಡಿ, ಪರಂಧಾಮನ್ ಮತ್ತು ಕಾಂ. ರವಿಚಂದ ಇವರುಗಳು ನೂತನವಾಗಿ ಚುನಾಯಿತರಾದ ಜಿಲ್ಲಾ ಸಮಿತಿಯ ಸದಸ್ಯರುಗಳು.

ಈ ಸಮ್ಮೇಳನದ ಅಂಗವಾಗಿ ಅಂದು ಸಂಜೆ 6 ಘಂಟೆಗೆ ಬಹಿರಂಗ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಪಿ. ಶ್ರೀನಿವಾಸರು ವಹಿಸಿದ್ದರು. ಕಾಂ. ಜಿ. ವಿ. ಶ್ರೀರಾಂರೆಡ್ಡಿಯವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

●

ಕೂಲಿಗಾಗಿ ಕಾಳು – ನಮಗೆಲ್ಲಿ ಕೂಲಿ! ನಮಗೆಲ್ಲಿ ಕಾಳು!

(5ನೇ ಪುಟದಿಂದ)

ನೀರಿನ ವಿವಾದದಿಂದಾಗಿ ಹಲವಾರು ಯೋಜನೆಗಳು ತಡೆಹಿಡಿಯಲ್ಪಟ್ಟಿವೆ. ಅಸಮರ್ಪಕ ಆಡಳಿತೆಯಿಂದಾಗಿ ಹಲವಾರು ಯೋಜನೆಗಳು ನಿಧಾನವಾಗಿ ಸಾಗುತ್ತಿದ್ದು ಅವುಗಳ ವೆಚ್ಚ ಮೂಲ ಅಂದಾಜಿಗಿಂತ ನೂರಾರು ಪಟ್ಟು ಹೆಚ್ಚಾಗುತ್ತಿವೆ. ರಾಜಕಾರಣ-ಗುಂಪುಗಾರಿಕೆಗಳಿಂದಾಗಿ ತಡೆಹಿಡಿಯಲ್ಪಟ್ಟ ಯೋಜನೆಗಳೂ ಹಲವಾರು. ತಾವು ಕೈಗೊಳ್ಳುವ ಯೋಜನೆಗಳನ್ನು ವೇಳೆಗೆ ಸರಿಯಾಗಿ ಪೂರ್ತಿಗೊಳಿಸಬೇಕೆಂಬ ದೃಢ ನಿರ್ಧಾರ ರಾಜ್ಯ ಸರಕಾರಗಳಿಗಿಲ್ಲ. 1981-84ರ ಅವಧಿಯಲ್ಲಿ 14 ದಶಲಕ್ಷ ಹೆಕ್ಟಾರ್ ಭೂಮಿಗೆ ನೀರಾವರಿ ಸೌಕರ್ಯ ಒದಗಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಇಂಥ ಗುರಿಗಳನ್ನು ಈ ಹಿಂದಿನ ಪಂಚವಾರ್ಷಿಕ ಯೋಜನೆಗಳಲ್ಲೂ ಇಟ್ಟುಕೊಳ್ಳಲಾಗಿತ್ತು. ಆದರೆ ಸಾಧನೆ ಮಾತ್ರ ಇಲ್ಲ. ಹೋದ ವರ್ಷ 24 ಲಕ್ಷ ಹೆಕ್ಟಾರುಗಳಿಗೆ ನೀರುಣಿಸಲಾಗಿದೆಯಂತೆ. ಈ ವರ್ಷ 26 ಲಕ್ಷ ಹೆಕ್ಟಾರುಗಳಿಗೆ, ಮುಂದಿನ 3 ವರ್ಷಗಳಲ್ಲಿ 90 ಲಕ್ಷ ಹೆಕ್ಟಾರು ಭೂಮಿಗೆ ನೀರುಣಿಸಲಾಗುವುದಂತೆ. ಜಾದು ಮಂತ್ರದಿಂದಲೂ ಇದು ಸಾಧ್ಯವಿಲ್ಲೆಂದು ಎಲ್ಲರಿಗೂ ಗೊತ್ತು. ನೀರಾವರಿ ಯೋಜನೆಗಳು ರಾಜ್ಯಗಳ ಅಧಿಕಾರಕ್ಕೊಳಪಟ್ಟಿವೆ. ಆದರೆ ಕೇಂದ್ರಸರಕಾರ ಪ್ರತಿಯೊಂದು ಯೋಜನೆಯಲ್ಲೂ ಕೈವಾಡ ನಡೆಸುತ್ತಿದೆ. ನದಿಗಳ ನೀರಿನ ರಾಷ್ಟ್ರೀಕರಣಗೊಳಿಸಬೇಕೆಂಬ ವಿಚಾರವನ್ನು ಕೇಂದ್ರಸರಕಾರ ನೀರಾವರಿ ಮಂತ್ರಿಗಳ ಸಭೆಯಲ್ಲಿ ಸೂಚ್ಯವಾಗಿ ಸೂಚಿಸಿದೆ. ಕೇರಳ, ಪ. ಬಂಗಾಳ ಸರಕಾರಗಳಲ್ಲದೇ, ಕರ್ನಾಟಕ ಸರಕಾರ ಕೂಡ ಆ ಸೂಚನೆಯನ್ನು ನಿರಾಕರಿಸಿದೆಯಂತೆ. ಪ್ರತಿಯೊಂದು ವಿಷಯದಲ್ಲಿ ಹೊಲಸುಮೇಲೋಗರ ಮಾಡುತ್ತಿರುವ, ರಾಜ್ಯಗಳ ಹಕ್ಕನ್ನು ಸಂಪೂರ್ಣ ಮೊಟಕುಗೊಳಿಸಿ, ಎಲ್ಲ ಆಡಳಿತ ರಂಗದಲ್ಲೂ ಏಕವ್ಯಕ್ತಿ ಸರ್ವಾಧಿಕಾರವನ್ನು ಹೇರುತ್ತಿರುವ ಇಂದಿರಾ ಸರಕಾರದ ನೀತಿಯನ್ನು ವಿರೋಧಿ ಪಕ್ಷ ಮಾತ್ರವಲ್ಲ ಆಳುವ ಪಕ್ಷದ ಮುಖ್ಯಮಂತ್ರಿಗಳೂ (ಕರ್ನಾಟಕವನ್ನೊಳಗೊಂಡು) ವಿರೋಧಿಸಿವೆ. ಅದು ಯೋಗ್ಯ ನಿಲುವೆ. ಆಳುವ ಕಾಂಗ್ರೆಸ್ ಪಕ್ಷಕ್ಕೆ ನೀರು ಹಂಚಿಕೆಯ ಕುರಿತು, ನೀರಿನ ಸದುಪಯೋಗದ ಕುರಿತು ಸರಿಯಾದ ನೈಜ ನಿಲುವೆಯೇ ಇಲ್ಲ. ಗುಂಪುಗಾರಿಕೆ, ಒತ್ತಾಯದ ರಾಜಕಾರಣಗಳಿಂದಾಗಿ ಕರ್ನಾಟಕದಂತೆಯೇ ಹಲವಾರು ರಾಜ್ಯಗಳು, ನದಿಗಳಲ್ಲಿ ನೀರಿದ್ದೂ ಬರಗಾಲದಂತಹ ಬವಣೆ ಎದುರಿಸಬೇಕಾಗಿದೆ.

ಪ್ರಕೃತಿಯ ಕೊಡುಗೆಯನ್ನು ಉಪಯೋಗಿಸುವುದು ಪ್ರತಿಯೊಬ್ಬನ ಕರ್ತವ್ಯ. ಆದರೆ ಆಳುವ ಕಾಂಗ್ರೆಸ್ ಸರಕಾರಗಳು ಕರ್ತವ್ಯಚ್ಯುತಿ ಮಾಡಿವೆ. ರಷ್ಯಾ–ಚೀನಾ ಮತ್ತಿನ್ನಿತರ ಸಮತಾವಾದಿ ದೇಶಗಳಲ್ಲಿ ಒಂದು ಹನಿ ನೀರನ್ನೂ ಹಾಳುಮಾಡದೆ, ಒಕ್ಕಲತನ, ವಿದ್ಯುಚ್ಛಕ್ತಿ ಉತ್ಪಾದನೆಗಾಗಿ ಉಪಯೋಗಿಸಲಾಗುತ್ತಿದೆ ಎಂಬ ವಿಷಯ ಆಡಳಿತೆ ನಡೆಸುವವರಿಗೆ ಗೊತ್ತು. ಅಲ್ಲಿ ಕಮ್ಯುನಿಸ್ಟ್ ಪಾರ್ಟಿ ಮುಖಂಡತ್ವದ ಸಮತಾವಾದಿ ಸರಕಾರಗಳಿವೆ. ಇಲ್ಲಿ ಅಧಿಕಾರಕ್ಕಾಗಿ, ಹಣ ಖರ್ಚುಮಾಡಿ ಆರಿಸಿಬಂದ ಗುತ್ತೇದಾರಿ ಬಂಡವಾಳದಾರರ ಇಂದಿರಾ ಸರಕಾರವಿದೆ. ಕಾರಣ 32 ವರ್ಷದ ಆಳ್ವಿಕೆಯಲ್ಲಿ ಶೇ. 15ರಷ್ಟು ನೀರನ್ನೂ ಬಳಸಿಕೊಳ್ಳುವ ಯೋಜನೆಗಳೂ ಪೂರ್ತಿಗೊಂಡಿಲ್ಲ.

ಸರಕಾರದ ಈ ನೀತಿ ವಿರುದ್ಧ ಹೋರಾಡಬೇಕು. ದೇಶದಲ್ಲಿ ಹರಿದು ಹಾಳಾಗುವ ನೀರಿನ ಸದುಪಯೋಗ ರೈತರಿಗೆ ಸಿಗಬೇಕು. ಅದಕ್ಕಾಗಿ ವಿರೋಧಿ ಪಕ್ಷಗಳೂ, ರೈತಸಂಘಗಳೂ ವಿಶಾಲ ತಳಹದಿಯ ರಂಗ ಕಟ್ಟಿ ಹೋರಾಡಬೇಕು.

○

ಸಮಾವೇಶ

ಕಾಸರಗೋಡು ತಾಲ್ಲೂಕಿನ ಬದಿಯಡ್ಕದಲ್ಲಿ ಯುವಜನ ಸಂಘಟನೆಯ ಸಮಾವೇಶವೊಂದು ತಾ. 2-10-81 ರಂದು ನಡೆಯಿತು. ಕಾಂ. ಬಿ. ಚಂದ್ರಶೇಖರ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕಾಸರಗೋಡು ವಿಭಾಗ ಸಮಿತಿಯ ಕಾರ್ಯದರ್ಶಿ ಕಾಂ. ಉದಯ್ ಕುಮಾರ್‌ರು ಯುವಜನರ ಸಮಸ್ಯೆಗಳ ಕುರಿತು ಮಾತನಾಡಿದರು.

ಕೊನೆಯಲ್ಲಿ ಬದಿಯಡ್ಕ ಘಟಕಕ್ಕೆ ಕೆಳಕಂಡವರನ್ನು ಪದಾಧಿಕಾರಿಗಳಾಗಿ ಚುನಾಯಿಸಲಾಯಿತು.

ಕಾಂ. ಬಿ. ರಾಮ್ ಅಧ್ಯಕ್ಷರಾಗಿ, ಕೃಷ್ಣ ಬದಿಯಡ್ಕ ಕಾರ್ಯದರ್ಶಿಯಾಗಿ, ಸಹಕಾರ್ಯದರ್ಶಿಯಾಗಿ ಸತ್ಯನಾರಾಯಣಭಟ್ ಇವರುಗಳು ಚುನಾಯಿತರಾಗಿದ್ದಾರೆ.

●

ಸ್ಥಳೀಯ ಸಮಿತಿಗಳ ಸಮ್ಮೇಳನ

ಯಶವಂತಪುರ

18-10-81ರಂದು ಬೆಂಗಳೂರಿನ ಯಶವಂತಪುರದಲ್ಲಿ ಪಕ್ಷದ ಸ್ಥಳೀಯ ಸಮಿತಿಯ ಸಮ್ಮೇಳನವು ನಡೆಯಿತು.

ಯಶವಂತಪುರ ಸ್ಥಳೀಯ ಸಮಿತಿಯ ಕಾರ್ಯದರ್ಶಿ ಕಾಂ. ಜಿ. ರಾಮು ಅವರು ಪ್ರತಿನಿಧಿಗಳನ್ನು ಸ್ವಾಗತಿಸಿ ವರದಿ ಮಂಡಿಸಿದರು. ಕಾಂ. ರಾಮು, ಸುಬ್ಬಯ್ಯ ಮತ್ತು ಪೈ ಇವರುಗಳು ಅಧ್ಯಕ್ಷ ಮಂಡಳಿಯಲ್ಲಿದ್ದರು.

ಸಮ್ಮೇಳನಕ್ಕೆ ಮುಖ್ಯ ಅತಿಥಿಗಳಾಗಿ ಪಕ್ಷದ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರಾದ ಕಾಂ. ಎನ್. ಎಲ್. ಉಪಾಧ್ಯಾಯ, ವಿ.ಜೆ.ಕೆ. ನಾಯರ್ ಮತ್ತು ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ. ಟಿ. ಎಸ್. ಅನಂತರಾವ್, ಜಿಲ್ಲಾ ಸೆಕ್ರೆಟಾರಿಯೇಟ್ ಸದಸ್ಯ ಕಾಂ. ಪಿ. ಕೆ. ಸುಬ್ರಮಣಿ ಆಗಮಿಸಿದ್ದರು.

ಕಾಂ. ಎನ್. ಎಲ್. ಮತ್ತು ಕಾಂ. ಅನಂತರಾವ್ ಅವರುಗಳು ಪ್ರಸಕ್ತ ರಾಜಕೀಯ ಪರಿಸ್ಥಿತಿ ಪಕ್ಷದ ಧೋರಣೆ ಕುರಿತು ವಿಷದೀಕರಿಸಿದರು. ಕಾಂ. ವಿಜೆಕೆಯವರು ಸಾಲ್ಬಿಯಾ ಪ್ಲೀನಂ, ಮೈಸೂರು ಪ್ಲೀನಂ ನಿರ್ಣಯಗಳನ್ನು ವಿವರಿಸಿ ಈ ಆಧಾರದಲ್ಲಿ ಪಕ್ಷ ಬಲಪಡಿಸಲು ತಿಳಿಸಿದರು.

ಕೊನೆಯಲ್ಲಿ ಸ್ಥಳೀಯ ಸಮಿತಿಗೆ ಚುನಾವಣೆ ನಡೆಯಿತು. ಕಾಂ. ಜಿ. ರಾಮು ಅವರು ಕಾರ್ಯದರ್ಶಿಯಾಗಿ ಪುನರಾಯ್ಕೆಯಾದರು. ಹಾಗೂ 11 ಜನ ಸಂಗಾತಿಗಳನ್ನು ಸಮಿತಿಗೆ ಸದಸ್ಯರುಗಳಾಗಿ ಚುನಾಯಿಸಲಾಯಿತು. ಯಶವಂತಪುರ ವಿಭಾಗದಿಂದ ಬೆಂಗಳೂರು ಜಿಲ್ಲಾ ಸಮ್ಮೇಳನಕ್ಕೆ 12ಜನ ಪ್ರತಿನಿಧಿಗಳನ್ನು ಆಯ್ಕೆಮಾಡಲಾಯಿತು.

ಕೃಷ್ಣರಾಜಪುರ

18-10-81 ರಂದು ಬೆಂಗಳೂರಿನ ಕೃಷ್ಣರಾಜಪುರದಲ್ಲಿ ಪಕ್ಷದ ಸ್ಥಳೀಯ ಸಮಿತಿಯ ಸಮ್ಮೇಳನ ನಡೆಯಿತು. ಕಾರ್ಯದರ್ಶಿ ಕಾಂ. ಕೃಷ್ಣಕುಮಾರ್ ಪ್ರತಿನಿಧಿಗಳನ್ನು ಮತ್ತು ವೀಕ್ಷಕರನ್ನು ಸ್ವಾಗತಿಸಿದರು. ಬೆಂಗಳೂರು ಜಿಲ್ಲಾ ಸಮಿತಿಯ ಸದಸ್ಯರಾದ ಕಾಂ. ಆರ್. ಶ್ರೀನಿವಾಸ್, ಬಾಸು ಮತ್ತು ಕಾಂ. ರೇವಣ್ಣ ಇವರುಗಳು ಅಧ್ಯಕ್ಷಮಂಡಳಿಯಲ್ಲಿದ್ದರು.

ಆರಂಭದಲ್ಲಿ ಇತ್ತೀಚೆಗೆ ನಿಧನರಾದ ಪಿ.ಬಿ ಸದಸ್ಯ ಕಾಂ. ಬಾಲಸುಬ್ರಮಣ್ಯಂ ಮತ್ತು ಪೋಲೀಸ್‌ಗೋಲಿಬಾರ್‌ನಿಂದ ನಿಧನರಾದ ರೈತ ಕಾರ್ಮಿಕ ಹುತಾತ್ಮರಿಗೆ ಶ್ರದ್ಧಾಂಜಲಿಯನ್ನರ್ಪಿಸಲಾಯಿತು.

ಕಾಂ. ಕೃಷ್ಣಕುಮಾರ್ ಚಟುವಟಿಕೆಗಳ ಕುರಿತ ವರದಿ ಮಂಡಿಸಿದರು. 16 ಜನ ಸಂಗಾತಿಗಳು ವರದಿ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದರು. ವರದಿಯನ್ನು ಅಂಗೀಕರಿಸಲಾಯಿತು.

ಕೊನೆಯಲ್ಲಿ ಕಾಂ. ಕೃಷ್ಣಕುಮಾರ್ ಅವರನ್ನು ಕಾರ್ಯದರ್ಶಿಯಾಗಿ ಪುನರಾಯ್ಕೆಮಾಡಲಾಯಿತು. ಹಾಗೂ ಮುಂಬರುವ ಜಿಲ್ಲಾ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಆಯ್ಕೆಮಾಡಲಾಯಿತು.

ಅಂದು ಸಂಜೆ ಸಮ್ಮೇಳನದ ಅಂಗವಾಗಿ ರಾಮಮೂರ್ತಿನಗರದಲ್ಲಿ ಬಹಿರಂಗಸಭೆ ನಡೆಸಲಾಯಿತು. ಕಾಂ. ಕೃಷ್ಣಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಈ ಸಭೆಯನ್ನುದ್ದೇಶಿಸಿ ಕಾಂ. ಜಗನ್ನಾಥ, ಗೋವಿಂದನ್ ಕುಟ್ಟಿ, ಕೋದಂಡರಾಮ್ ಮತ್ತು ಕಾಂ. ಶ್ರೀನಿವಾಸ ಮಾತನಾಡಿದರು.

○

ಬಿಜಾಪುರದಲ್ಲಿ ಕಾರ್ಮಿಕ ಸಂಘಗಳ ಸಮಾವೇಶ

ಬಿಜಾಪುರ ಜಿಲ್ಲೆಯ ಕಾರ್ಮಿಕ ಚಳುವಳಿಯಲ್ಲಿ ಅಕ್ಟೋಬರ್ 18 ಅತಿ ಮಹತ್ವದ ದಿನ. ಜಿಲ್ಲೆಯ 30 ಕಾರ್ಮಿಕ ಸಂಘಗಳ 250ಕ್ಕೂ ಮೇಲ್ಪಟ್ಟು ಕಾರ್ಮಿಕ ಪ್ರತಿನಿಧಿಗಳು ಸಭೆಸೇರಿ ಕೇಂದ್ರ ಸರಕಾರದ ಬೆಲೆಯೇರಿಕೆ ನೀತಿ, ಕರಾಳ ಕಾನೂನು ಮತ್ತು ಕಾರ್ಮಿಕ ಚಳುವಳಿಯಲ್ಲಿ ಪೋಲೀಸರ ಕೈವಾಡದ ವಿರುದ್ಧ ಹೋರಾಡಲು ಪಣ ತೊಟ್ಟರು. ಕೇಂದ್ರ ಸಮನ್ವಯ ಸಮಿತಿಯ ಆದೇಶದಂತೆ ನವೆಂಬರ್ 3 ರಂದು ಬಲವಾದ ಪ್ರತಿಭಟನೆ ವ್ಯಕ್ತಮಾಡುವ ನಿರ್ಣಯ ಮಾಡಿದರು. ಎನ್. ಕೆ. ಉಪಾಧ್ಯಾಯ, ಆರ್. ಡಿ. ಹಳಿಂಗಳಿ, ವಿ. ಸಿ. ರಜಪೂತ, ಎಸ್. ವಿ. ಹಜೇರಿ, ಎಸ್. ಕೆ. ಶಿರಶ್ಯಾಡ ಇವರು ಸಂಚಾಲಕರಾಗಿರುವ 30ಜನರ ಕಾರ್ಮಿಕ ಸಂಘಗಳ ಜಿಲ್ಲಾ ಸಮನ್ವಯ ಸಮಿತಿಯನ್ನು ರಚಿಸಲಾಯಿತು.

ಜನತಾ ಪಾರ್ಟಿಯ ಪ್ರಧಾನ ಕಾರ್ಯದರ್ಶಿ ರಾಮಕೃಷ್ಣ ಹೆಗ್ಗಡೆಯವರು ಸಮ್ಮೇಳನವನ್ನು ಉದ್ಘಾಟನೆ ಮಾಡುತ್ತ, ಇಂದಿರಾ ಸರಕಾರದ ಬೆಲೆಯೇರಿಕೆ ನೀತಿಯನ್ನೂ, ಕಾರ್ಮಿಕರು ಮುಷ್ಕರ ಹೂಡುವ ಹಕ್ಕನ್ನು ಮೊಟಕುಗೊಳಿಸುವ ಕರಾಳ ಕಾಯ್ದೆಯನ್ನೂ ಖಂಡಿಸಿ, ಕಾರ್ಮಿಕರೆಲ್ಲ ಒಗ್ಗಟ್ಟಾಗಿ ಹೋರಾಡುವುದು ಅತ್ಯಗತ್ಯವೆಂದು ಹೇಳಿದರು.

ಡಿ. ಎಂ. ಖಿಲಾರಿ, ರವೀಂದ್ರ ಹಳಿಂಗಳಿ, ವಿ. ಸಿ. ರಜಪೂತ, ಶಿವಶೆಟ್ಟಿಯವರ ಅಧ್ಯಕ್ಷ ಮಂಡಳಿಯ ನೇತೃತ್ವದಲ್ಲಿ ಸಮ್ಮೇಳನ ನಡೆಯಿತು. ಎನ್. ಕೆ. ಉಪಾಧ್ಯಾಯರು ಮುಖ್ಯ ನಿರ್ಣಯ ಮಂಡಿಸಿ ವಿವರಣೆ ನೀಡಿದರು. 16 ಪ್ರತಿನಿಧಿಗಳು ಚರ್ಚೆಯಲ್ಲಿ ಪಾಲ್ಗೊಂಡರು. ಮಹಿಳೆಯರ ಪರವಾಗಿ ಗೀತಾ ಅಕ್ಕಿಯವರೂ, ರೈತಸಂಘದ ಪರವಾಗಿ ಭೀಮಸಿ ಕಲಾದಗಿಯವರೂ, ಸಿ. ಪಿ. ಐ. ಪರವಾಗಿ ರವೀಂದ್ರ ದೇಸಾಯಿ, ಸಿ.ಪಿ.ಎಂ. ಪರವಾಗಿ ಫಿರೋಜಾಬಾದ್ ಅವರೆಲ್ಲ ಶುಭ ಕೋರಿದರು.

ದಾಂಡೇಲಿ ಪ್ಲೈವುಡ್ ಕಾರ್ಖಾನೆ ಕೆಲಸಗಾರರ ಮೇಲೆ ಮತ್ತು ಬನಹಟ್ಟಿಯ ಪವರ್‌ಲೂಂ ಕಾರ್ಮಿಕರ ಮೇಲೆ ಪೋಲೀಸರು ನಡೆಸಿದ ದಬ್ಬಾಳಿಕೆಯನ್ನು ಖಂಡಿಸುವ, ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಕೂಡಲೇ ಪೂರ್ತಿಗೊಳಿಸಬೇಕೆಂದು ಒತ್ತಾಯಪಡಿಸುವ, ಹುಬ್ಬಳ್ಳಿ-ಶೋಲಾಪುರ ರೇಲ್ವೆ ಬ್ರಾಡ್ ಗೇಜಾಗಿ ಪರಿವರ್ತನೆಯಾಗಬೇಕೆಂದೂ, ಬಿಜಾಪುರ ಜಿಲ್ಲೆಯಲ್ಲಿ ಹೊಸ ಉದ್ಯಮಗಳನ್ನು ಸ್ಥಾಪಿಸಬೇಕೆಂದೂ, ವಿವಿಧ ಕೈಗಾರಿಕೆಗಳಲ್ಲಿ ಕನಿಷ್ಟ ವೇತನ ಕೂಡಲೇ ನಿಗದಿಪಡಿಸಬೇಕೆಂದೂ ಕೇಳುವ ನಿರ್ಣಯಗಳು ಪಾಸಾದವು.

●

ಆಟೋರಿಕ್ಷಾ ಚಾಲಕರ ಸಂಘಟನಾ ಸಮಿತಿ

ಇದೇ ಅಕ್ಟೋಬರ್ 11 ಮತ್ತು 12 ರಂದು ಬೆಂಗಳೂರು, ಮಂಗಳೂರು, ಧಾರವಾಡ - ಹುಬ್ಬಳ್ಳಿ, ಬೆಳಗಾಂ ಜಿಲ್ಲೆಗಳ ಆಟೋ ಚಾಲಕರ ಸಂಘಗಳ ಪದಾಧಿಕಾರಿಗಳು ಬೆಂಗಳೂರಿನಲ್ಲಿ ಸಭೆ ಸೇರಿ ರಾಜ್ಯಮಟ್ಟದ ಸಂಘಟನಾ ಸಮಿತಿಯೊಂದನ್ನು ರಚಿಸಿಕೊಂಡರು. ಈ ಸಂಘಟನಾ ಸಮಿತಿಯಲ್ಲಿ 12ಜನ ಸದಸ್ಯರಿದ್ದಾರೆ.

ಅಸಂಘಟಿತ ಆಟೋ ಚಾಲಕರ ಸಂಘಟನೆಗೆ ಸಂಘಟಿತ ಕಾರ್ಮಿಕ ವರ್ಗದ ಬೆಂಬಲ ಪಡೆಯಬೇಕೆಂಬ ಅಭಿಪ್ರಾಯವನ್ನು ಸಮಿತಿ ವ್ಯಕ್ತಪಡಿಸಿದೆ. 1982ರ ಫೆಬ್ರವರಿಯಲ್ಲಿ ರಾಜ್ಯಮಟ್ಟದ ಆಟೋ ಚಾಲಕರ ಸಮ್ಮೇಳನ ನಡೆಸಬೇಕೆಂದು ತೀರ್ಮಾನಿಸಿದೆ. ಈ ಕುರಿತು ಕಾರ್ಯಕ್ರಮ ನಿರೂಪಿಸಿ ಸಂಘಟನೆಯನ್ನು ಬಲಪಡಿಸಲು ನಾಲ್ಕು ಜನ ಸಂಚಾಲಕರನ್ನು ಆಯ್ಕೆ ಮಾಡಿರುವ ಸಮಿತಿ, ಸಂಘಟನೆಗೆ ಅನುವು ಆಗಲು 1. ಹಳೇಮೈಸೂರು 2. ದಕ್ಷಿಣ ಕನ್ನಡ 3. ಉತ್ತರ ಕರ್ನಾಟಕ ಈ ರೀತಿ ವಿಭಾಗ ಮಾಡಲಾಗಿದ್ದು ಸಮಿತಿಯ ಸಂಚಾಲಕರಾಗಿ ಬೆಂಗಳೂರಿನ ಕಾಂ. ಎ. ವಿ. ರಮೇಶ ಮತ್ತು ಕೆ. ಎ. ಹುಸೇನ್, ಮಂಗಳೂರಿನ ಕಾಂ. ಕೆ. ಅಬೂಬೇಕರ್ ಹುಬ್ಬಳ್ಳಿಯ ಕಾಂ. ಬಸವರಾಜ್ ಬೆಳ್ಳೊಳ್ಳಿ ಇವರುಗಳನ್ನು ಆಯ್ಕೆ ಮಾಡಲಾಗಿದೆ.

ಕುಂದಾಪುರದಲ್ಲಿ ಎಸ್.ಎಫ್.ಐ. ಸಭೆ

28-9-1981ರಂದು ಕುಂದಾಪುರ ತಾಲ್ಲೂಕು ಎಸ್. ಎಫ್. ಐ. ಸರ್ವಸದಸ್ಯರ ಸಭೆ ಸೇರಿತ್ತು. ಸಭೆಯ ಅಧ್ಯಕ್ಷತೆಯನ್ನು ಶಿವರಾಮ್ ವಹಿಸಿದ್ದರು. ಮುಖ್ಯ ಅತಿಥಿಯಾಗಿ ರಾಜ್ಯ ಸಮಿತಿ ಅಧ್ಯಕ್ಷ ಆರ್. ಜಯಕುಮಾರ್ ಭಾಗವಹಿಸಿದ್ದರು. ಅಧ್ಯಕ್ಷರು 'ಪಾರ್ಲಿಮೆಂಟ್ ಚಲೋ' ಕಾರ್ಯಕ್ರಮದ ವಿವರಣೆಯನ್ನು ನೀಡಿದರು. ನಂತರ ಈ ಕೆಳಗಿನವರಿರುವ ಹೊಸ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷ ವಿಶ್ವನಾಥ ಕೆ., ಉಪಾಧ್ಯಕ್ಷ ಶಿವರಾಮ ಮತ್ತು ಉತ್ಕಲ, ಕಾರ್ಯದರ್ಶಿ ರತ್ನಾಕರನ್, ಜೊತೆ ಕಾರ್ಯದರ್ಶಿ ಇಸ್ಮಾಯಿಲ್ ಹಾಗೂ ಶಕುಂತಲಾ ಮತ್ತು 7 ಜನರು ಸದಸ್ಯರನ್ನು ಆಯ್ಕೆಮಾಡಲಾಯಿತು. ಭಂಡಾರ್‌ಕಾರ್ಸ್ ಕಾಲೇಜು ಕಮಿಟಿಗೆ ಕಾರ್ಯದರ್ಶಿಯಾಗಿ ಶಿವರಾಮ ಮತ್ತು ಜೂ. ಕಾಲೇಜು ಕಮಿಟಿಗೆ ಕು॥ ಶಕುಂತಳಾರನ್ನು ಮತ್ತು ವಿದ್ಯಾರ್ಥಿನಿಯರ ಸಮಿತಿಗೆ ಸಂಚಾಲಕಿಯರನ್ನಾಗಿ ಕು॥ ಉತ್ಕಲರನ್ನು ಆಯ್ಕೆ ಮಾಡಲಾಯಿತು. ಆರ್. ಜಯಕುಮಾರ್‌ರವರು ಸಮಿತಿ ಸದಸ್ಯರ ಕೆಲಸಗಳನ್ನು ಮನವರಿಕೆ ಮಾಡಿದರು. ರತ್ನಾಕರರವರ ಧನ್ಯವಾದದೊಂದಿಗೆ ಸಭೆ ಮುಕ್ತಾಯವಾಯಿತು.

●

ವರ್ಗಾವಣೆ ಪ್ರತಿಭಟಿಸಿ ಅನ್ನಸತ್ಯಾಗ್ರಹ

ಉಡುಪಿ ದೂರವಾಣಿ ಕಚೇರಿಯಲ್ಲಿ ದಂಡಿಯುತ್ತಿರುವ 4 ಜನ ನೌಕರರನ್ನು ದುರುದ್ದೇಶಪೂರ್ವಕವಾಗಿ, ಯಾವುದೇ ನೀತಿನಿಯಮ ಪಾಲಿಸದೇ ದೂರವಾಣಿ ಕಾರವಾರ ವಿಭಾಗದ ಹೊರಗಿನ ಅತಿದೂರದ ಪ್ರದೇಶಗಳಿಗೆ ವರ್ಗಮಾಡಿರುವುದನ್ನು ಉಡುಪಿಯ ಸಂಯುಕ್ತ ಕಾರ್ಮಿಕ ಕ್ರಿಯಾವೇದಿಕೆ ಖಂಡಿಸುತ್ತದೆ.

ದೂರವಾಣಿ ಅಧಿಕಾರಿಗಳು 6-10-81ರಂದು ಯಾವುದೇ ಪೂರ್ವ ಸೂಚನೆಗಳನ್ನು ಅಥವಾ ವರ್ಗಾವಣೆ ಆದೇಶ (order) ನೀಡದೇ ಪೋಲೀಸ್ ಬಲವನ್ನು ಉಪಯೋಗಿಸಿ ವರ್ಗಾವಣೆಗೊಳಗಾಗಿರುವ ನೌಕರರು ಕಚೇರಿ ಪ್ರವೇಶಿಸುವುದನ್ನು ತಡೆದಿದ್ದಾರೆ. ಈ ಕುರಿತ ಪ್ರತಿಭಟನಾ ಪತ್ರಗಳನ್ನು ಸ್ವೀಕರಿಸಲೂ ನಿರಾಕರಿಸಿದ್ದಾರೆ. ಕಾರವಾರ ವಿಭಾಗದ ದೂರವಾಣಿ ನೌಕರರು ಈ ದಬ್ಬಾಳಿಕೆಯ ವರ್ಗಾವಣೆ ಹಾಗೂ ಅಧಿಕಾರಿವರ್ಗದ ದಮನಕಾರೀ ನೀತಿಯನ್ನು ಪ್ರತಿಭಟಿಸಿ ಎಲ್ಲ ಕಡೆಗಳಲ್ಲಿಯೂ ಸರದಿ ಉಪವಾಸ ಸತ್ಯಾಗ್ರಹವನ್ನು 17-10-81ರಿಂದ ಕೈಗೊಂಡಿದ್ದಾರೆ.

ಉಡುಪಿಯ ಸಂಯುಕ್ತ ಕಾರ್ಮಿಕ ಕ್ರಿಯಾ ವೇದಿಕೆಯು ಈ ಹೋರಾಟವನ್ನು ಬೆಂಬಲಿಸಿದೆ. ಉಡುಪಿಯ ಎಲ್ಲ ಕಾರ್ಮಿಕ ಬಾಂಧವರು ಆಡಳಿತ ವರ್ಗದ ದಬ್ಬಾಳಿಕೆಯ ವಿರುದ್ಧ ಹೋರಾಡುತ್ತಿರುವ ದೂರವಾಣಿ ಕಾರ್ಮಿಕರನ್ನು ಬೆಂಬಲಿಸಬೇಕೆಂದು ಕ್ರಿಯಾ ವೇದಿಕೆಯ ಸಂಚಾಲಕ ವಿಶ್ವನಾಥರೈ ವಿನಂತಿಸಿದ್ದಾರೆ.

ಬೇಡಿಕೆಗಳಿಗೆ ಒತ್ತಾಯ

ಬೆಂಗಳೂರಿನ ವೈಟ್‌ಫೀಲ್ಡ್ ರಸ್ತೆಯಲ್ಲಿರುವ "ವೈಕಾರ್" ಕಾರ್ಖಾನೆಯ ಕಾರ್ಮಿಕರು ಬೋನಸ್ಸು ಮತ್ತಿನ್ನಿತರ ಕೆಲವು ಬೇಡಿಕೆಗಳ ಕುರಿತು ಆಡಳಿತ ವರ್ಗಕ್ಕೆ ಕಳೆದ ಜೂನ್‌ನಲ್ಲಿ ಪತ್ರ ಸಲ್ಲಿಸಿದ್ದರು.

ಸುಮಾರು 4 ತಿಂಗಳ ದೀರ್ಘ ಅವಧಿಯ ನಂತರವೂ ಆಡಳಿತ ವರ್ಗ ತನ್ನ ಹಠಮಾರಿತನದ ಧೋರಣೆಯಿಂದಾಗಿ ಒಂದು ಸುಮಧುರ ಒಪ್ಪಂದಕ್ಕೆ ಬರದಾಗಿದೆ. ಅದೂ ಅಲ್ಲದೇ ಯೂನಿಯನ್ ಧುರೀಣರುಗಳೊಂದಿಗೆ ಮಾತುಕತೆಗೇ ನಿರಾಕರಿಸುತ್ತಿದ್ದಾರೆ.

ಮ್ಯಾನೇಜಮೆಂಟಿನ ಈ ಧೋರಣೆ ಪ್ರತಿಭಟಿಸಿರುವ ಯೂನಿಯನ್‌ನ ಪ್ರಧಾನಕಾರ್ಯದರ್ಶಿ ಕಾಂ. ಜಾನ್ ವಿನ್ಸೆಂಟ್‌ರು ಕೂಡಲೇ ಇತ್ಯರ್ಥಕ್ಕೆ ಆಡಳಿತವರ್ಗ ಮುಂದಾಗದಿದ್ದಲ್ಲಿ ಕಾರ್ಮಿಕರು ಹೋರಾಟಕ್ಕಿಳಿಯಬೇಕಾದೀತೆಂದು ಎಚ್ಚರಿಸಿದ್ದಾರೆ. ●

ಚಂದಾ ವಿವರ

ಬಿಡಿ ಪ್ರತಿ	: 60ಪೈಸೆ
6 ತಿಂಗಳಿಗೆ	: 15ರೂ.
ವಾರ್ಷಿಕ ಚಂದಾ	: 30ರೂ.

ಐಕ್ಯರಂಗಕ್ಕೆ

ಚಂದಾದಾರರಾಗಿರಿ

ಗುಂಡೂರಾವ್ ದರ್ಬಾರ್ ವಿರುದ್ಧ ಗುಲ್ಬರ್ಗಾ ಬಂದ್

ಗುಂಡೂರಾವ್ ಮಂತ್ರಿಮಂಡಲವು ಬೇರೆಬೇರೆ ವಿಭಾಗೀಯ ಕೇಂದ್ರಗಳಲ್ಲಿ ಸಂಪುಟದ ಸಭೆ ಸೇರುವುದರ ವಿರುದ್ಧ ಪ್ರತಿಭಟಿಸಿ ಅಕ್ಟೋಬರ್ 20 ರಂದು ಯಶಸ್ವಿ ಗುಲಬರ್ಗಾಬಂದ್ ಆದ ವರದಿ ದೊರೆತಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಕಾಂಗ್ರೆಸ್(ಎಸ್), ಜನತಾ ಪಕ್ಷ ಮತ್ತು ಸಿ.ಪಿ.ಐ.ಗಳಿಂದ ಕೂಡಿದ ಪ್ರಗತಿಪರ ಜನತಂತ್ರ ರಂಗವು ಬಂದ್‌ಗೆ ಕರೆ ನೀಡಿತ್ತು. ಜನರಿಗೆ ಪರಿಹಾರ ದೊರೆಯುವ ಕಾರ್ಯಕ್ರಮಗಳಿಗೆ ಹಣವನ್ನು ವಿನಿಯೋಗಿಸುವ ಬದಲು, ಪ್ರಚಾರಕ್ಕಾಗಿ ಮಂತ್ರಿಮಂಡಲದ ಸಭೆಯನ್ನು ಬೇರೆಬೇರೆಡೆ ನಡೆಸಲು ಲಕ್ಷಾಂತರ ರೂಪಾಯಿ ವೆಚ್ಚಮಾಡುವುದನ್ನು ಪ್ರತಿಭಟಿಸುವುದು ಮತ್ತು ಕ್ಷಾಮಪೀಡಿತ ಪ್ರದೇಶಗಳಲ್ಲಿ ತುರ್ತುಪರಿಹಾರ ಕ್ರಮ ಕೈಗೊಳ್ಳದಿರುವುದು ಹಾಗೂ ದೀರ್ಘಕಾಲೀಕ ಪರಿಹಾರ ಯೋಜನೆಹಾಕದಿರುವುದನ್ನು ಪ್ರತಿಭಟಿಸುವುದು ಜನತಂತ್ರರಂಗದ ಉದ್ದೇಶವಾಗಿತ್ತು. ಸಚಿವ ಸಂಪುಟದ ಸಭೆ ಸೇರಿಸಿ, ದರ್ಬಾರು ನಡೆಸುವುದನ್ನು ಹೆಚ್ಚು ಕಡಿಮೆ ಎಲ್ಲ ವಿರೋಧ ಪಕ್ಷಗಳೂ ವಿರೋಧಿಸಿವೆ.

ಸೆಪ್ಟೆಂಬರದಲ್ಲಿ ಬೆಳಗಾವಿಯಲ್ಲಿ ಸಭೆ ಸೇರಿದ ಮೇಲೆ ಇದೀಗ ಗುಂಡೂರಾವ್ ಸಂಪುಟದ ಸಭೆ ಅಕ್ಟೋಬರ್ 22 ರಂದು ಗುಲಬರ್ಗಾದಲ್ಲಿ ಸೇರಿತ್ತು. ಜನತಂತ್ರರಂಗದ ನೇತೃತ್ವದಲ್ಲಿ ಭಾರಿ ಪ್ರದರ್ಶನ ನಡೆಸಿ ಸಚಿವ ಸಂಪುಟದ ಸಭೆಯ ವಿರುದ್ಧ ಪ್ರದರ್ಶನ ನಡೆಸಿದ್ದವರ ಮೇಲೆ ಪೋಲೀಸರಿಂದ ಲಾಠಿ ಚಾರ್ಜು ನಡೆದು ಹತ್ತಾರು ಮಂದಿಗೆ ಜಖಂ ಆದ ವರದಿಯೂ ದೊರೆತಿದೆ. ಸೂಪರ್ ಬಜಾರ್‌ನಿಂದ ಸಚಿವ ಸಂಪುಟದ ಸಭೆ ನಡೆಯುತ್ತಿದ್ದ ಐವಾನ್-ಎ-ಷಾಹಿ ಮಹಲ್‌ಗೆ ಮೆರವಣಿಗೆಯಲ್ಲಿ ಹೋಗುತ್ತಿದ್ದಾಗ ಐವಾನ್-ಎ-ಷಾಹಿ ಬಡಾವಣೆಯಲ್ಲಿರುವ ಜಗನ್ನಾಥರಾವ್ ಚಂದ್ರಕಿ ಅವರ ಮನೆಯ ಬಳಿ ಪೋಲೀಸರು ಲಾಠಿ ಬೀಸಲು ತೊಡಗಿದರು. ಶಾಂತಯುತವಾಗಿ ಹೋಗುತ್ತಿದ್ದ ಪ್ರದರ್ಶನಕಾರರ ಮೇಲೆ ಪೋಲೀಸರು ಲಾಠಿ ಪ್ರಯೋಗ ಮಾಡಿದ್ದು ನೋಡುತ್ತಿದ್ದವರಿಗೆಲ್ಲಾ ಆಚ್ಚರಿ ಉಂಟುಮಾಡಿತು.

ಪ್ರದರ್ಶನಕಾರರು ಸಚಿವ ಸಂಪುಟದ ಸಭೆ ನಡೆಯುವಲ್ಲಿಗೆ ಹೋಗಲಿಲ್ಲವೇ ಶಿಸ್ತುಬದ್ಧವಾಗಿ ಹರಡಿದರು. ಕೊನೆಗೆ ಮುಖ್ಯಮಂತ್ರಿಯವರೇ ಸ್ವತಃ ಬಂದು ಭೆಟ್ಟಿಯಾಗಲು ಒಪ್ಪಿದ್ದರು. ಪ್ರದರ್ಶನಕಾರರ ಪ್ರತಿನಿಧಿಗಳಾಗಿ ಕಾಂ. ಗಂಗಾಧರ ನಮೋಶಿ, ಕಾಂ. ಮಹಮ್ಮದ್ ಹಸನ್ ಖಾನ್ ಮತ್ತು ಹನುಮಂತ ದೇಸಾಯಿಯವರು ಕೊಟ್ಟ ಮನವಿ ಪತ್ರವನ್ನು ಸ್ವೀಕರಿಸಿ, ಅದರಲ್ಲಿರುವ ಬೇಡಿಕೆಗಳನ್ನು ಪರಿಶೀಲಿಸಲು ಮುಖ್ಯಮಂತ್ರಿಯವರು ಭರವಸೆ ಇತ್ತ ಬಳಿಕ ಪ್ರದರ್ಶನಕಾರರು ವಾಪಾಸಾದರು.

ಗುಲಬರ್ಗಾದಲ್ಲಿ ಸೇರಿರುವ ಮಂತ್ರಿಮಂಡಳದ ಸಭೆಯು ಹೈದರಾಬಾದು ಕರ್ನಾಟಕ ಪ್ರದೇಶದ ಬೆಳವಣಿಗೆಯ ಬಗ್ಗೆ ಪ್ರತ್ಯೇಕ ಬೋರ್ಡ್ ಒಂದನ್ನು ನೇಮಿಸಲು ನಿರ್ಣಯಿಸಿರುವುದು ಸ್ವಾಗತಾರ್ಹ. ಆದರೆ ಚುನಾವಣೆಯ ದೃಷ್ಟಿಯಿಂದ ಮಾತ್ರ ಸರಕಾರವು ಮಾಡುವ ನಾಟಕವು ಆಗದೆ, ಅದು ಪೂರ್ಣ ಕಾರ್ಯಗತವಾಗಬೇಕು.

22 ರಂದು ಬೀದರ, ರಾಯಚೂರು ಮತ್ತು ಬಳ್ಳಾರಿಗಳಲ್ಲೂ ಸಂಪೂರ್ಣ ಬಂದ್ ಆಚರಿಸಿದ ವರದಿಗಳೂ ಬಂದಿವೆ. ರಾಜ್ಯದ ಮಂತ್ರಿಮಂಡಲದ ಧಂಬಾಚಾರಗಳ ವಿರುದ್ಧ ಜನತೆಯು ಸಕ್ರಿಯವಾಗಿ ಪ್ರತಿಭಟಿಸಿರುವುದು ಸ್ವಾಗತಾರ್ಹವಾಗಿದೆ.

ಸಂಪಾದಕೀಯ

(ಒಂದನೇ ಪುಟದಿಂದ)

ಸರಕಾರದ ಕೆಲಸಕಾರ್ಯದಲ್ಲಿ ಲೋಪದೋಷಗಳು ಇರಲಿಲ್ಲವೆಂದಲ್ಲ. ಬೇರೆಬೇರೆ ರಾಜಕೀಯ, ಸೈದ್ಧಾಂತಿಕ ನಿಲುವುಗಳನ್ನು ಹೊಂದಿದ ಪಕ್ಷಗಳು ಒಂದು ಸೇರುವಾಗ ಅದೆಷ್ಟೋ ಭಿನ್ನಾಭಿಪ್ರಾಯ ಮತ್ತು ಆಂತರಿಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತೆ. ಆದರೆ ಅವನ್ನು ಪರಿಹರಿಸುವುದಕ್ಕೆ ಅನುಕೂಲವಾಗುವಂತೆ ವರ್ತಿಸುವ ಬದಲು, ಸರ್ವಾಧಿಕಾರಿ ಕಾಂಗ್ರೆಯ ಪ್ರಯತ್ನಗಳಿಗೆ ಅನುಕೂಲವಾಗುವಂತೆ ಈ ಪಕ್ಷಗಳು ವರ್ತಿಸಿವೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯಿಂದ ಮೊದಲ್ಗೊಂಡು, ಕೃಷಿ ಕೂಲಿಗಾರರಿಗೆ ಪೆನ್ಶನ್ ನೀಡುವ ತನಕ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡ ಕಾಂ. ಇ. ಕೆ. ನಾಯನಾರ್ ನೇತೃತ್ವದಲ್ಲಿನ ಎಡ ಪ್ರಜಾಪ್ರಭುತ್ವ ಸರಕಾರ 21 ತಿಂಗಳುಗಳಲ್ಲಿ ಸಾಧಿಸಿದ್ದು ಅಭಿನಂದನಾರ್ಹ. ಅವನ್ನೆಲ್ಲಾ ಮರೆತುದು ಮಾತ್ರವಲ್ಲದೆ, ಸಿ. ಪಿ. ಐ. (ಎಂ)ನ ಮೇಲೆ ಆರ್. ಎಸ್. ಎಸ್. ಮತ್ತು ಕಾಂಗ್ರೆ ಗೂಂಡಾಗಳು ನಡೆಸುವ ದಾಳಿಗಳ ಬಗ್ಗೆ ಚಕಾರ ಶಬ್ದವೆತ್ತದೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮೇಲೆ ಮಾತ್ರ ಕಾನೂನು ವ್ಯವಸ್ಥೆಯ ಜವಾಬ್ದಾರಿ ಹೊರಿಸಿದ ಆಂತೋಣಿ ಕಾಂಗ್ರೆಸ್ ಮತ್ತು ಮಾಣಿಕಾಂಗ್ರೆಸ್ಸಿನ ವಿಶ್ವಾಸದ್ರೋಹಕ್ಕೆ ಕೇರಳದ ಜನತೆಯೇ ಉತ್ತರಕೊಡುವುದು ಖಂಡಿತ. ಹಾಗೆಯೇ ಕಾಂಗ್ರೆ ಮತ್ತು ಇತರರ ಕುತಂತ್ರಗಳಿಗೂ, ಸಂದರ್ಭಸಾಧಕ ನೀತಿಗಳಿಗೂ ಕೇರಳದ ಜನತೆ ಉತ್ತರಿಸುವುದೂ ಖಂಡಿತ. ಮತ್ತೆ ಅನೈತಿಕ ಕೂಟಗಳನ್ನು ರಚಿಸಿ ಕಾಂಗ್ರೆ ಸರಕಾರ ನಡೆಸಲು ಪ್ರಯತ್ನಿಸುವುದು ಅಥವಾ ಅಧ್ಯಕ್ಷರ ಆಳ್ವಿಕೆಯನ್ನು ನಡೆಸುವ ಬದಲು ಕೇರಳದಲ್ಲಿ ಮತ್ತೆ ಚುನಾವಣೆ ನಡೆಯುವುದೇ ಸೂಕ್ತ. ಕೇರಳದ ಜನತೆಯೇ ಮತ್ತೆ ತೀರ್ಪು ಕೊಡುವಂತಾಗಲಿ.

○

ರಾಜ್ಯದಾದ್ಯಂತ ಪ್ರತಿಭಟನೆಗೆ ಸಿ. ಪಿ. ಐ. (ಎಂ) ಕರೆ

(1ನೇ ಪುಟದಿಂದ)

ರುತ್ತಾರೆ. ದಾಂಡೇಲಿಯಲ್ಲಿ ಪೋಲೀಸರು ನಡೆಸಿರುವ ದೌರ್ಜನ್ಯವನ್ನು ಪ್ರತಿಭಟಿಸಿ, ಕಾಂ. ಸ್ಥಳೀಕರ್ ಅವರ ಬಿಡುಗಡೆಗೆ ಒತ್ತಾಯಿಸಿ ಈಗಾಗಲೇ ತಾ. 15-10-81ರಂದು ಕಾರವಾರದಲ್ಲಿ ಬಿಣಗಾ ಕಾಸ್ಟಿಕ್ ಸೋಡಾ ಫ್ಯಾಕ್ಟರಿಯ ಕಾರ್ಮಿಕರು ಮಿಂಚಿನ ಮುಷ್ಕರ ನಡೆಸಿ, ಮೆರವಣಿಗೆಯಲ್ಲಿ ಹೋಗಿ ಜಿಲ್ಲಾಧಿಕಾರಿಗೆ ಮನವಿ ಅರ್ಪಿಸಿ ಬಹಿರಂಗ ಸಭೆ ನಡೆಸಿರುವರು. 16-10-81ರಂದು ಹರಿಹರದಲ್ಲಿ 2000 ಕಾರ್ಮಿಕರು ಸಂಜೆ 4-30ಕ್ಕೆ ಮೆರವಣಿಗೆಯಲ್ಲಿ ಹೋಗಿ ತಹಸೀಲ್ದಾರರನ್ನು ಭೆಟ್ಟಿಯಾಗಿ ಮನವಿ ಅರ್ಪಿಸಿ ಬಹಿರಂಗ ಸಭೆ ನಡೆಸಿರುವರು. ಧಾರವಾಡದಲ್ಲಿ ಸಾವಿರಾರು ಮಂದಿ ಕಾರ್ಮಿಕರಿಂದ ಕೂಡಿದ ಬೃಹತ್ ಮೆರವಣಿಗೆ ತೆಗೆದು ಪೋಲೀಸ್ ದೌರ್ಜನ್ಯವನ್ನು ಖಂಡಿಸಲಾಗಿದೆ. ಕವಚೂರಿನ ಪ್ಲೈವುಡ್ ಕಾರ್ಮಿಕರು ಮೆರವಣಿಗೆ ನಡೆಸಿ ಪ್ರತಿಭಟನೆ ಸಲ್ಲಿಸಿರುವರು.

21-10-81ರಂದು ಬೆಂಗಳೂರಿನಲ್ಲಿ ಸೇರಿರುವ ಪಕ್ಷದ ರಾಜ್ಯಸಮಿತಿ ಸೆಕ್ರೆಟಾರಿಯೆಟ್ ದಾಂಡೇಲಿಯಲ್ಲಿನ ಬೆಳವಣಿಗೆಯನ್ನು ವಿಮರ್ಶಿಸಿ, ಪೋಲೀಸರು ನಡೆಸಿದ ದೌರ್ಜನ್ಯವನ್ನು ಗಂಭೀರವಾಗಿ ಪರಿಗಣಿಸಿ, ಈ ಪಾಶವೀಕೃತ್ಯವನ್ನು ಖಂಡಿಸಲು ಮತ್ತು ಸರಕಾರದ ಕಾರ್ಮಿಕ ವಿರೋಧಿ ದಮನಕಾರಿ ನೀತಿಗಳನ್ನು ವಿರೋಧಿಸಲು ಇದೇ ತಿಂಗಳು 30ರಂದು (30-10-81ರಂದು) ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲು ಕರೆ ಇತ್ತಿದೆ. ನ್ಯಾಯಾಂಗ ತನಿಖೆಯನ್ನು ನಡೆಸಬೇಕೆಂದೂ, ದೌರ್ಜನ್ಯ ನಡೆಸಲು ಕಾರಣರಾದ ಪೋಲೀಸು ಅಧಿಕಾರಿಗಳನ್ನು ಕೂಡಲೇ ಕೆಲಸದಿಂದ ವಜಾಮಾಡಬೇಕೆಂದೂ, ಬಂಧಿತ ಮುಖಂಡರನ್ನೂ ಕಾರ್ಮಿಕರನ್ನೂ ಕೂಡಲೇ ಬಿಡುಗಡೆಗೊಳಿಸಬೇಕೆಂದೂ, ಪೋಲೀಸ್ ದೌರ್ಜನ್ಯಕ್ಕೆ ಒಳಗಾದವರಿಗೆ ಪರಿಹಾರ ನೀಡಬೇಕೆಂದೂ, ಪ್ಲೈವುಡ್ ಕಾರ್ಮಿಕರ ಬೇಡಿಕೆಗಳನ್ನು ಈ ಕೂಡಲೇ ಈಡೇರಿಸಬೇಕೆಂದೂ ಒತ್ತಾಯಿಸಿ ರಾಜ್ಯದಾದ್ಯಂತ ಪತ್ರಿಕಾ ಹೇಳಿಕೆ, ಮೆರವಣಿಗೆ, ಸಭೆ ನಡೆಸುವುದು ಮತ್ತು ಸ್ಥಳೀಯವಾಗಿರುವ ಉನ್ನತರವಿನ್ನೂ, ಅಧಿಕಾರಿಗಳ ಮೂಲಕ ಮುಖ್ಯಮಂತ್ರಿಯವರಿಗೆ ಮನವಿ ಕೊಡುವ ಕೆಲಸವನ್ನೂ ಭಾರಿ ಪ್ರಮಾಣದಲ್ಲಿ ನಡೆಸಲು ಸಿ. ಪಿ. ಐ. (ಎಂ) ರಾಜ್ಯ ಸಮಿತಿ ಸೆಕ್ರೆಟಾರಿಯೆಟ್ ತನ್ನೆಲ್ಲಾ ಕೆಳಘಟಕಗಳಿಗೂ, ಸಾಮೂಹಿಕ ಸಂಘಟನೆಗಳಿಗೂ ಕರೆ ಈಯುತ್ತಿದೆ.

ಹಾಗೆಯೇ ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳೂ, ಕಾರ್ಮಿಕ ಸಂಘಟನೆಗಳೂ ಸರಕಾರದ ಈ ಪಾಶವೀ ಕೃತ್ಯವನ್ನು ಪ್ರತಿಭಟಿಸಲೂ ಸಿ. ಪಿ. ಐ. (ಎಂ) ಕರೆ ಈಯುತ್ತದೆ.

ರಿಟ್ ವಿಚಾರಣೆಗೆ

ಮೈಕೋ ಆಡಳಿತವರ್ಗ ಹಾಗೂ ಖಾನ್ ನೇತೃತ್ವದ ಸಂಘದೊಡನೆ ಮಾಡಿಕೊಳ್ಳಲಾದ ಒಪ್ಪಂದವನ್ನು ಪ್ರಶ್ನಿಸಿದ್ದ ರಿಟ್ ಅರ್ಜಿಯನ್ನು ಹೈಕೋರ್ಟು ವಿಚಾರಣೆಗಾಗಿ ಅಂಗೀಕರಿಸಿದೆ.

ಕಾಂ. ಸೂರ್ಯನಾರಾಯಣರಾವ್ ನೇತೃತ್ವದ ಸಂಘದ ಇನ್ನೊಂದು ಅಪೀಲಿನ ಸಂಬಂಧದಲ್ಲಿ ಹೈಕೋರ್ಟ್ ವಜಾ ಆದ ಸಂಘದ ಎರಡನೇ ಉಪಾಧ್ಯಕ್ಷ ಪಿ. ಎಚ್. ನರಸಿಂಹಯ್ಯ ಸಂಘದ ಕಚೇರಿ ಆವರಣ ಪ್ರವೇಶಿಸುವದನ್ನು ತಡೆಯುವ ಮಧ್ಯಂತರ ಆಜ್ಞೆ ಹೊರಡಿಸಿದೆ.

○

ಬೆಲೆಏರಿಕೆ ವಿರುದ್ಧ ಪ್ರತಿಭಟಿಸಲು ಸಿ. ಪಿ. ಐ. (ಎಂ) ಕರೆ

ಬೆಲೆಏರಿಕೆಯು ತೀವ್ರವಾಗುತ್ತಿದ್ದು, ವ್ಯಾಪಕ ಹಾಗೂ ವ್ಯವಸ್ಥಿತವಾದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಜೀವನಾವಶ್ಯಕವಸ್ತುಗಳನ್ನು ನ್ಯಾಯಬೆಲೆಯಲ್ಲಿ ಜನಸಾಮಾನ್ಯರಿಗೆ ಒದಗಿಸುವುದರಲ್ಲಿ ರಾಜ್ಯ ಸರಕಾರವು ಸಂಪೂರ್ಣ ವಿಫಲವಾಗಿದೆ. ಮಾತ್ರವಲ್ಲ ಭ್ರಷ್ಟಾಚಾರ ಮತ್ತು ಸಾಕಷ್ಟು ಆಹಾರಸಾಮಾಗ್ರಿಗಳ ಸರಬರಾಜು ಇಲ್ಲದೆ ಜನತೆಯು ತುಂಬಾ ಕಷ್ಟಕ್ಕೊಳಗಾಗಿದೆ. ಬೆಂಗಳೂರಿನಂತಹ ನಗರಗಳಲ್ಲಿ ಸಾವಿರಗಟ್ಟಲೆ ಮಹಿಳೆಯರು, ಮಕ್ಕಳು ರೇಷನ್ ಅಂಗಡಿಗಳೆದುರು ಗಂಟೆಗಟ್ಟಲೆ ಕಾದು ನಿಂತು, ಬರಿಗೈಯಿಂದ ಹಿಂದಿರುಗುವುದು ಸರ್ವೇಸಾಮಾನ್ಯವಾಗಿದೆ. ಈ ವಿಚಾರದಲ್ಲಿ ಸರಕಾರದ ವಿಫಲತೆ ಮತ್ತು ಅಸಡ್ಡೆಯನ್ನು ತೀವ್ರವಾಗಿ ಖಂಡಿಸಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಸೆಕ್ರೆಟಾರಿಯೆಟ್, ಬೆಲೆಏರಿಕೆಯನ್ನು ಪ್ರತಿಭಟಿಸಲೂ, ಗ್ರಾಮಮಟ್ಟದಿಂದ ಮೊದಲ್ಗೊಂಡು ನಗರದ ಎಲ್ಲ ವಾರ್ಡುಗಳಿಗೂ ಸಾಕಷ್ಟು ಸಂಖ್ಯೆಯಲ್ಲಿ ರೇಷನ್ ಅಂಗಡಿಗಳನ್ನು ಒದಗಿಸಿ, ವ್ಯವಸ್ಥಿತವಾದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಜೀವನಾವಶ್ಯಕ ವಸ್ತುಗಳನ್ನು ಒದಗಿಸಲು ಸರಕಾರವನ್ನು ಒತ್ತಾಯಿಸಲು ರಾಜ್ಯದಾದ್ಯಂತ ಪ್ರತಿಭಟನೆ, ಪ್ರಜಾಪ್ರಭುತ್ವ ಚಳುವಳಿಗಳನ್ನು ನಡೆಸಲು ಪಕ್ಷದ ಎಲ್ಲಾ ಘಟಕಗಳಿಗೂ ಕರೆ ಇತ್ತಿದೆ. ಬೆಂಗಳೂರಿನಲ್ಲಿ ಈಗಾಗಲೇ ಬೆಲೆಏರಿಕೆಯ ವಿರುದ್ಧ ಪಕ್ಷದ ಜಿಲ್ಲಾಸಮಿತಿಯು ಚಳುವಳಿಯನ್ನು ಪ್ರಾರಂಭಿಸಿದೆ. ಶಿವಮೊಗ್ಗದಲ್ಲಿ ಬೆಲೆಏರಿಕೆ ಮತ್ತು ಸೌದೆ ಬೆಲೆಏರಿಕೆ ವಿರೋಧಿಸಿ ಯಶಸ್ವಿ ಬಂದ್ ನಡೆದ ವಾರ್ತೆ ಬಂದಿದೆ. ರಾಜ್ಯದಾದ್ಯಂತ ಚಳುವಳಿ ನಡೆಸಲು ಪಕ್ಷದ ಎಲ್ಲಾ ಘಟಕಗಳೂ ಶ್ರಮಿಸಲು ಸೆಕ್ರೆಟಾರಿಯೆಟ್ ಕರೆ ಈಯುತ್ತಿದೆ.

ನಗರ ಸಭೆಗಳಿಗೂ, ಕೆಲವು ಪುರಸಭೆಗಳಿಗೂ ರಾಜ್ಯಸರಕಾರವು ಚುನಾವಣೆ ನಡೆಸದಿರುವುದನ್ನು ಖಂಡಿಸಿದ ಸೆಕ್ರೆಟಾರಿಯೆಟ್, ಈ ಕೂಡಲೇ ಚುನಾವಣೆ ನಡೆಸಲು ಸರಕಾರವನ್ನು ಒತ್ತಾಯಿಸಿದೆ. ಚುನಾವಣೆ ನಡೆಸುವಂತೆ ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳೂ ಒಟ್ಟಾಗಿ ಸರಕಾರದ ಮೇಲೆ ಒತ್ತಾಯತರಲೂ ಸಿಪಿಐ(ಎಂ) ವಿನಂತಿಸಿದೆ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT